ಅ)	2018-19 ಹಾಗೂ 2019-20 ನೇ ಸಾಲಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರಿಗೆ ನೀಡಿರುವ ಬೆಳೆ ವಿಮಾ ಸೌಲಭ್ಯಗಳಾವುವು; ಸರ್ಕಾರಗಳು ಹಾಗೂ ರೈತರು ಪಾವತಿಸಿರುವ ಪ್ರೀಮಿಯಂ ಮೊತ್ತವೆಷ್ಟು; (ವಿವರ ನೀಡುವುದು)	➢ ಪ್ರಧಾನ ಮಂತ್ರಿ ಫಸಲ್ ಬಿಮಾ (Pradhana Mantri Fasal Bima Yojana) ಯೋಜನೆಯ ಮಾರ್ಗಸೂಚಿಯಂತೆ ಮಳೆ ಅಭಾವ ಅಥವಾ ಇತರೆ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದ ಅಧಿಸೂಚಿತ ವಿಮಾ ಘಟಕದಲ್ಲಿ ಶೇಕಡಾ 75ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ (Prevented sowing/Planting Risk) ವಿಮಾ ಮೊತ್ತದ ಗರಿಷ್ಟ ಶೇಕಡಾ 25 ರಷ್ಟು ಪರಿಹಾರವನ್ನು ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಇತ್ಯರ್ಥಪಡಿಸುವುದು. ➢ ಅಧಿಸೂಚಿತ ಘಟಕದಲ್ಲಿ ಸಂಭವಿಸುವ ಹವಾಮಾನ ವೈಪರಿತ್ಯಗಳಾದ ಹೆಚ್ಚಿನ ಮಳೆ, ನೆರೆ / ಪ್ರವಾಹಗಳಿಂದ ಬೆಳೆ ಮುಳುಗಡೆ, ದೀರ್ಘಕಾಲದ ತೇವಾಂಶ ಕೊರತೆ (Prolonged dry spell), ತೀವ್ರ ಬರಗಾಲ ಮುಂತಾದವುಗಳಿಂದ ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಬಿತ್ತನೆಯಾದ ನಂತರ ಕಟಾವಿಗೆ ಮೊದಲು ನಿರೀಕ್ಷಿತ ಇಳುವರಿಯು ಪ್ರಾರಂಭಿಕ ಇಳುವರಿಯ ಶೇಕಡಾ 50ಕ್ಕಿಂತ ಕಡಿಮೆ ಇದ್ದರೆ, ವಿಮೆ ಮಾಡಿಸಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಶೇಕಡಾ 25ರಷ್ಟು ಹಣವನ್ನು ಮುಂಚಿತವಾಗಿ ವಿಮಾ ಸಂಸ್ಥೆಯು ನೀಡುತ್ತದೆ. ➢ ಯೋಜನೆಯ ಅವಕಾಶದಂತೆ ಬೆಳೆ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೆ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ (Post Harvest Losses) ಕಟಾವು ಮಾಡಿದ ಎರಡು ವಾರಗಳೊಳಗೆ (ಹದಿನಾಲ್ಕು ದಿನಗಳು) ಚಂಡಮಾರುತ, ಚಂಡಮಾರುತ ಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ ವೈಯುಕ್ತಿಕವಾಗಿ ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ಬೆಳೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸುತ್ತದೆ. ಸದರಿ ಯೋಜನೆ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಪಡಿಸುವುದು.

ಕ್ರ. ಸಂ	ಪ್ರಶ್ನೆ	ಉತ್ತರ
		2018-19 ಹಾಗೂ 2019-20 ನೇ ಸಾಲಿನಲ್ಲಿ ಸರ್ಕಾರ ಹಾಗೂ ರೈತರು ಪಾವತಿಸಿದ ಪ್ರೀಮಿಯಂ ಮೊತ್ತದ ವಿವರ. (ರೂ. ಲಕ್ಷಗಳಲ್ಲಿ)

ವರ್ಷ/ ಹಂಗಾಮು	ರೈತರ ವಿಮಾ ಕಂತು	ರಾಜ್ಯದ ವಿಮಾ ಕಂತು	ಕೇಂದ್ರದ ವಿಮಾ ಕಂತು	ಒಟ್ಟು ವಿಮಾ ಕಂತು
2018 ಮುಂಗಾರು	15258.48	49354.79	49354.79	113968.06
2018-19 ರ ಹಿಂಗಾರು & ಬೇಸಿಗೆ	3626.60	17504.80	17504.80	38636.19
2019 ಮುಂಗಾರು	13325.79	59127.73	59127.73	131581.25
2019-20ರ ಹಿಂಗಾರು & ಬೇಸಿಗೆ	4030.11	22462.71	22462.71	48955.52

ಕ್ರ. ಸಂ	ಪ್ರಶ್ನೆ	ಉತ್ತರ
ಆ)	ರೈತರಿಗೆ ವಿಮೆ ಸೌಲಭ್ಯ ನೀಡುತ್ತಿರುವ ಕಂಪನಿಗಳಾವುವು ಹಾಗೂ ರೈತರಿಗೆ ಪಾವತಿಸಿರುವ ವಿಮಾ ಮೊತ್ತವೆಷ್ಟು; (ವಿವರ ನೀಡುವುದು)	**ಅನುಬಂಧ-1 ರಲ್ಲಿ ಮಾಹಿತಿ ನೀಡಿದೆ**
ಇ)	2018-19ನೇ ಸಾಲಿನಲ್ಲಿ ರೈತರಿಗೆ ಬೆಳೆ ನಷ್ಟಕ್ಕಾಗಿ ದೊರೆತಿರುವ ಪರಿಹಾರವೆಷ್ಟು? (ಜಿಲ್ಲಾವಾರು ವಿವರ ನೀಡುವುದು)	**ಅನುಬಂಧ-2 ರಲ್ಲಿ ಮಾಹಿತಿ ನೀಡಿದೆ**

ಸಂಖ್ಯೆ:- ಕೃಇ/106/ಕೃಕೈಉ/2020

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

ಅನುಬಂಧ -1

ರೈತರಿಗೆ ವಿಮಾ ಸೌಲಭ್ಯ ನೀಡುತ್ತಿರುವ ವಿಮಾ ಸಂಸ್ಥೆ ವಿವರ ಹಾಗೂ ಇತ್ಯರ್ಥಪಡಿಸಲಾದ ವಿಮಾ ಪರಿಹಾರ ಮೊತ್ತ

ಕ್ರ. ಸಂ.	ವರ್ಷ /ಹಂಗಾಮು	ವಿಮಾ ಕಂಪನಿಗಳು	ರೈತರು ಪಾವತಿಸಿದ ಪ್ರೀಮಿಯಂ ಮೊತ್ತ (ರೂ. ಲಕ್ಷಗಳಲ್ಲಿ)	ಇತ್ಯರ್ಥಪಡಿಸ ಲಾದ ವಿಮಾ ಪರಿಹಾರ ಮೊತ್ತ (ರೂ. ಲಕ್ಷಗಳಲ್ಲಿ)
1	ಮುಂಗಾರು 2018	ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ	4749.55	42156.76
2		ಫ್ಯೂಚರ್ ಜನರಲಿ ಇನ್ಸೂರೆನ್ಸ್ ಕಂಪನಿ	1085.33	2952.34
3		ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ	1914.06	25516.77
4		ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ	935.43	3717.53
5		ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ	4808.54	75119.50
6		ಯೂನಿವರ್ಸಲ್ ಸೋಂಪೋ ಜನರಲ್ ಇನ್ಸೂರೆನ್ಸ್ ಕಂಪನಿ	1765.57	3270.23
		ಒಟ್ಟು ಮೊತ್ತ	15258.48	**152733.13**
7	ಹಿಂಗಾರು ಮತ್ತು ಬೇಸಿಗೆ 2018-19	ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ	1064.58	27188.48
8		ಫ್ಯೂಚರ್ ಜನರಲಿ ಇನ್ಸೂರೆನ್ಸ್ ಕಂಪನಿ	362.67	2395.60
9		ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ	698.50	32245.67
10		ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ	17.80	286.43
11		ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ	1130.91	27628.71
12		ಯೂನಿವರ್ಸಲ್ ಸೋಂಪೋ ಜನರಲ್ ಇನ್ಸೂರೆನ್ಸ್ ಕಂಪನಿ	352.14	10239.12
		ಒಟ್ಟು ಮೊತ್ತ	3626.60	99984.01
13	ಮುಂಗಾರು 2019 (ಮಧ್ಯಂತರ ವಿಮಾ ಪರಿಹಾರ ಹಾಗೂ prevented sowing claims)	ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ	2379.58	4634.56
14		ಬಜಾಜ್ ಅಲಿಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ	1385.53	160.88
15		ಭಾರತಿ ಆಕ್ಸಾ ಇನ್ಸೂರೆನ್ಸ್ ಕಂಪನಿ	2881.66	45.619
16		ಫ್ಯೂಚರ್ ಜನರಲಿ ಇನ್ಸೂರೆನ್ಸ್ ಕಂಪನಿ	4070.03	8377.478
17		ಹೆಚ್.ಡಿ.ಎಫ್.ಸಿ. ಎರ್ಗೋ ಕಂಪನಿ	1581.86	0
18		ಯೂನಿವರ್ಸಲ್ ಸೋಂಪೋ ಜನರಲ್ ಇನ್ಸೂರೆನ್ಸ್ ಕಂಪನಿ	1027.13	7352.51
		ಒಟ್ಟು ಮೊತ್ತ	13325.79	20571.05

ಅನುಬಂಧ -2

2018-19 ನೇ ಸಾಲಿನಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಜಿಲ್ಲಾವಾರು ರೈತರಿಗೆ ದೊರೆತಿರುವ ಪರಿಹಾರ ಮೊತ್ತ

ಕ್ರ. ಸಂ.	ವರ್ಷ / ಹಂಗಾಮು	ಜಿಲ್ಲೆಗಳು	ರೈತರು ಪಾವತಿಸಿದ ಪ್ರೀಮಿಯಂ ಮೊತ್ತ (ರೂ. ಲಕ್ಷಗಳಲ್ಲಿ)	ಇತ್ಯರ್ಥಪಡಿಸ ಲಾದ ವಿಮಾ ಪರಿಹಾರ ಮೊತ್ತ (ರೂ. ಲಕ್ಷಗಳಲ್ಲಿ)
1	ಮುಂಗಾರು 2018	ಬೆಂಗಳೂರು ನಗರ	2.82	21.81
2		ಬೀದರ್	902.63	11659.84
3		ದಕ್ಷಿಣ ಕನ್ನಡ	2.09	0.97
4		ದಾವಣಗೆರೆ	179.05	943.17
5		ಧಾರವಾಡ	1734.65	10860.12
6		ಕೊಡಗು	6.48	4.68
7		ಮೈಸೂರು	24.55	88.64
8		ರಾಯಚೂರು	1306.21	13248.76
9		ತುಮಕೂರು	591.07	5328.77
10		ಬೆಳಗಾವಿ	628.66	994.57
11		ಚಾಮರಾಜನಗರ	120.88	433.06
12		ಯಾದಗಿರಿ	335.79	1524.71
13		ಬೆಂಗಳೂರು ಗ್ರಾಮಾಂತರ	19.21	197.24
14		ಚಿಕ್ಕಬಳ್ಳಾಪುರ	149.47	3198.53
15		ಗದಗ	1745.38	22121.01
16		ಬಳ್ಳಾರಿ	442.05	1684.24
17		ಚಿಕ್ಕಮಗಳೂರು	73.57	23.92
18		ಉತ್ತರಕನ್ನಡ	419.81	2009.37
19		ಚಿತ್ರದುರ್ಗ	654.56	11869.12
20		ಹಾಸನ	356.37	4457.46
21		ಹಾವೇರಿ	1325.82	15338.42
22		ಕೋಲಾರ	90.87	1163.16
23		ಕೊಪ್ಪಳ	830.65	13689.18
24		ಮಂಡ್ಯ	99.86	637.32
25		ಶಿವಮೊಗ್ಗ	213.67	2618.76
26		ಉಡುಪಿ	6.76	0.27
27		ವಿಜಯಪುರ	1229.99	25345.81
28		ಬಾಗಲಕೋಟೆ	1291.54	2185.38
29		ಕಲಬುರಗಿ	467.92	1054.00
30		ರಾಮನಗರ	6.11	30.85
ಮುಂಗಾರು 2018 ರ ಒಟ್ಟು ಮೊತ್ತ			**15258.48**	**152733.13**

ಕ್ರ. ಸಂ.	ವರ್ಷ / ಹಂಗಾಮು	ಜಿಲ್ಲೆಗಳು	ರೈತರು ಪಾವತಿಸಿದ ಪ್ರೀಮಿಯಂ ಮೊತ್ತ (ರೂ. ಲಕ್ಷಗಳಲ್ಲಿ)	ಇತ್ಯರ್ಥಪಡಿಸ ಲಾದ ವಿಮಾ ಪರಿಹಾರ ಮೊತ್ತ (ರೂ. ಲಕ್ಷಗಳಲ್ಲಿ)
1	2018-19ರ ಹಿಂಗಾರು ಮತ್ತು ಬೇಸಿಗೆ	ಬೀದರ್	144.17	4186.03
2		ದಾವಣಗೆರೆ	4.78	25.03
3		ಧಾರವಾಡ	604.91	15594.03
4		ಮೈಸೂರು	4.57	5.18
5		ರಾಯಚೂರು	305.84	7377.30
6		ತುಮಕೂರು	0.31	0.92
7		ಬೆಳಗಾವಿ	284.74	1977.57
8		ಚಾಮರಾಜನಗರ	38.04	363.72
9		ಯಾದಗಿರಿ	39.88	54.30
10		ಚಿಕ್ಕಬಳ್ಳಾಪುರ	2.30	27.69
11		ಗದಗ	696.20	32217.98
12		ಚಿಕ್ಕಮಗಳೂರು	0.74	3.53
13		ಬಳ್ಳಾರಿ	16.89	282.72
14		ಉತ್ತರಕನ್ನಡ	0.17	0.18
15		ಚಿತ್ರದುರ್ಗ	145.05	2699.58
16		ಹಾಸನ	22.64	892.82
17		ಹಾವೇರಿ	54.55	846.05
18		ಕೋಲಾರ	7.18	266.89
19		ಕೊಪ್ಪಳ	304.92	9579.06
20		ಮಂಡ್ಯ	7.10	90.89
21		ಶಿವಮೊಗ್ಗ	2.19	18.77
22		ಉಡುಪಿ	0.01	0.13
23		ವಿಜಯಪುರ	587.27	13234.53
24		ಬಾಗಲಕೋಟೆ	309.86	9372.66
25		ಕಲಬುರಗಿ	41.04	850.15
26		ರಾಮನಗರ	1.24	16.31
2018-19 ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಒಟ್ಟು ಮೊತ್ತ			3626.60	99984.01
ಒಟ್ಟು ಮೊತ್ತ (ಮುಂಗಾರು, ಹಿಂಗಾರು ಮತ್ತು ಬೇಸಿಗೆ 2018-19)			18885.07	252717.14

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಡಾ : ಅಂಜಲಿ ಹೇಮಂತ್ ನಿಂಬಾಳ್ಕರ್ (ಖಾನಾಪುರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**251**
ಉತ್ತರಿಸಬೇಕಾದ ದಿನಾಂಕ	:	21.09.2020
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಇಂದಿರಾ ಆ್ಯಪ್ ಮೂಲಕ ಪ್ರಗತಿ ದಾಖಲಿಸಿದರೂ ವಸತಿ ಯೋಜನೆಯಡಿ ಮನೆ ನಿರ್ಮಿಸಿಕೊಂಡ ಫಲಾನುಭವಿಗಳ ಖಾತೆಗೆ ಸರ್ಕಾರದ ಸಹಾಯ ಧನ ಜಮೆಯಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಇಲ್ಲ.
(ಆ)	ಹಾಗಿದ್ದಲ್ಲಿ ಪ್ರಗತಿನುಗುಣವಾಗಿ ಸಹಾಯ ಧನದ ಮೊತ್ತವು ಫಲಾನುಭವಿಗಳ ಖಾತೆಗೆ ಜಮೆಯಾಗದಿರಲು ಕಾರಣಗಳೇನು ;	ವಸತಿ ಯೋಜನೆಗಳಡಿ ಫಲಾನುಭವಿಗಳು ನಿರ್ಮಿಸಿಕೊಂಡಿರುವ ಮನೆಗಳನ್ನು ನಿಗಮವು ಅಭಿವೃದ್ಧಿ ಪಡಿಸಿರುವ "ಇಂದಿರಾ ಮನೆ" ಆ್ಯಪ್ ಮೂಲಕ ಜಿ.ಪಿ.ಎಸ್ ಆಧಾರಿತ ಛಾಯಚಿತ್ರಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಫಲಾನುಭವಿಯಿಂದ ಪಡೆದು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ದೃಢೀಕರಣದ ಆಧಾರದ ಮೇಲೆ ಫಲಾನುಭವಿಗಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ಅನುದಾನವನ್ನು ನೇರವಾಗಿ ಬಿಡುಗಡೆಗೊಳಿಸಲಾಗುತ್ತಿದೆ. ಸರ್ಕಾರದ ಆದೇಶದಂತೆ ವಿವಿಧ ವಸತಿ ಯೋಜನೆಗಳಡಿ ಪ್ರಗತಿಯಲ್ಲಿರುವ ಮನೆಗಳನ್ನು ಇಂದಿರಾ ಮನೆ ಮೊಬೈಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಜಿ.ಪಿ.ಎಸ್ ಗೆ ಅಳವಡಿಸಿ ಅರ್ಹಗೊಂಡ ನಂತರ ಸದರಿ ಮನೆಗಳ ಪ್ರಗತಿಯನ್ನು ಮತ್ತೊಮ್ಮೆ Geo ಆಧಾರಿತ Vigil App ಮೂಲಕ ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರು ಪರಿಶೀಲಿಸಿ ಅರ್ಹಗೊಂಡ ಮನೆಗಳಿಗೆ ಆಧಾರ್ ಜೋಡನೆಯಾದ ಫಲಾನುಭವವಿಗಳ ಬ್ಯಾಂಕ್ ಖಾತೆಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.
(ಇ)	ಹಾಗಿದ್ದಲ್ಲಿ ಅಂತಹ ಫಲಾನುಭವಿಗಳಿಗೆ ಬಿಡುಗಡೆ ಮಾಡಲು ಬಾಕಿ ಇರುವ ಮೊತ್ತವೇಷ್ಟು; ಬಾಕಿ ಮೊತ್ತವನ್ನು ಯಾವ ಕಾಲಮಿತಿಯೊಳಗೆ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗುವುದು ?	Vigil App ಮೂಲಕ ಪರಿಶೀಲಿಸಲಾದ ಮನೆಗಳಿಗೆ ಪ್ರಗತಿಗನುಗುಣವಾಗಿ 2019-20 ಮತ್ತು 2020-21ನೇ ಸಾಲಿನಲ್ಲಿ ರೂ.893.07ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಉಳಿದ ಮನೆಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ :ವಇ 255 ಹೆಚ್‌ಎಂ 2020

(ವಿ. ಸೋಮಣ್ಣ)
ವಸತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	252
ಸದಸ್ಯರ ಹೆಸರು	:	ಶ್ರೀಮತಿ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ||
ಉತ್ತರಿಸುವ ದಿನಾಂಕ	:	21-09-2020
ಉತ್ತರಿಸುವವರು	:	ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಡಾ||ಬಿ.ಆರ್ ಅಂಬೇಡ್ಕರ್ ಭವನ ನಿರ್ಮಿಸುವ ಕಾಮಗಾರಿಯು ಕೆಲ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಖಾನಾಪುರ ತಾಲ್ಲೂಕು ಮಟ್ಟದ ಡಾ||ಬಿ.ಆರ್ ಅಂಬೇಡ್ಕರ್ ಭವನ ನಿರ್ಮಿಸುವ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; ಸದರಿ ಕಾಮಗಾರಿಯು ಕೆಲ ವರ್ಷಗಳಿಂದ ಸ್ಥಗಿತಗೊಂಡಿರಲು ಕಾರಣಗಳೇನು; ಹಾಗೂ ತ್ವರಿತ ಅನುಷ್ಠಾನಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು?	ಹೌದು. ಬೆಳಗಾವಿ ಜಿಲ್ಲೆ, ಖಾನಾಪುರ ತಾಲ್ಲೂಕು ಕೇಂದ್ರದಲ್ಲಿ ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಡಾ|| ಬಿ.ಆರ್ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಮಂಜೂರಾತಿ ನೀಡಿ, ಮೊದಲನೇ ಕಂತಿನಲ್ಲಿ ರೂ.15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು, ಖಾನಾಪುರ ತಾಲ್ಲೂಕು ಕೇಂದ್ರದಲ್ಲಿ ಡಾ|| ಬಿ.ಆರ್ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ನಿವೇಶನ ಲಭ್ಯವಿಲ್ಲದ ಕಾರಣ ಸರ್ಕಾರದ ಆದೇಶ ಸಂಖ್ಯೆ: ಸಕಇ 398 ಪಕವಿ 2018, ದಿನಾಂಕ: 03-09-2018ರಲ್ಲಿ ಸದರಿ ತಾಲ್ಲೂಕು ಕೇಂದ್ರಕ್ಕೆ ಮಂಜೂರು ಮಾಡಲಾದ ಡಾ|| ಬಿ.ಆರ್ ಅಂಬೇಡ್ಕರ್ ಭವನದ ಮಂಜೂರಾತಿಯನ್ನು ರದ್ದುಗೊಳಿಸಿ ಆದೇಶಿಸಲಾಗಿರುತ್ತದೆ. ಬೆಳಗಾವಿ ಜಿಲ್ಲೆ, ಖಾನಾಪುರ ತಾಲ್ಲೂಕು ಕೇಂದ್ರದಲ್ಲಿ ಡಾ|| ಬಿ.ಆರ್ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಸೂಕ್ತ ನಿವೇಶನ ಲಭ್ಯವಾದ ನಂತರ ಪರಿಶೀಲಿಸಲಾಗುವುದು.

ಸಕಇ 371 ಪಕವಿ 2020

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 253
ಸದಸ್ಯರ ಹೆಸರು : ಶ್ರೀಮತಿ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ :
ಉತ್ತರಿಸುವ ದಿನಾಂಕ : 21-09-2020
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ವಿವಿಧ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ ಕುಟುಂಬಗಳು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಒಳಚರಂಡಿ, ಬೀದಿ ದೀಪ, ಕುಡಿಯುವ ನೀರು ಇನ್ನಿತ್ಯಾದಿಗಳು ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ ಕಳೆದ 3 ವರ್ಷಗಳಲ್ಲಿ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ಸರ್ಕಾರವು ಬಿಡುಗಡೆ ಮಾಡಿದ ಅನುದಾನವೆಷ್ಟು;	ಕಳೆದ ಮೂರು ವರ್ಷಗಳಲ್ಲಿ ಖಾನಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ರೂ.185.00 ಲಕ್ಷಗಳಿಗೆ ಮಂಜೂರಾತಿ ನೀಡಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.
ಇ)	ಈ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳಾವುವು ಮತ್ತು ಸದರಿ ಕಾಮಗಾರಿಗಳ ಸ್ಥಿತಿಗತಿಯೇನು?	ಖಾನಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಭೌತಿಕ ಪ್ರಗತಿ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಕಇ 329 ಎಸ್‌ಎಲ್‌ಪಿ 2020

(ಗೋವಿಂದ ಎಂ.ಕಾರಜೋಳ)
ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಸಚಿವರು

ಶ್ರೀಮತಿ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ॥ (ಖಾನಾಪುರ) ರವರ ಚುಕ್ಕೆಗುರುತಿಲ್ಲದ ಪ್ರ.ಸಂ:253 ಕ್ಕೆ ಅನುಬಂಧ
ಕೈಗೊಂಡಿರುವ ಕಾಮಗಾರಿಗಳ ಭೌತಿಕ ಪ್ರಗತಿ ವಿವರ ಈ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಪರಿಶಿಷ್ಟ ಜಾತಿ ಕಾಲೋನಿ ವಿವರ	ಕಾಮಗಾರಿಯ ವಿವರ	ಅಂದಾಜು ಮೊತ್ತ	ಕಾಮಗಾರಿಯ ಪ್ರಸ್ತುತ ಹಂತ
1	ಕರಿಕಟ್ಟಿ	ಸಿಮೆಂಟ್ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ.	39.30	ಮುಕ್ತಾಯಗೊಂಡಿದೆ
2	ಪ್ರಭುನಗರ	ಚರಂಡಿ ನಿರ್ಮಾಣ.	7.20	ಪ್ರಗತಿಯಲ್ಲಿದೆ
3	ಹಲಸಿ	ಸಿಮೆಂಟ್ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ.	14.00	ಪ್ರಗತಿಯಲ್ಲಿದೆ
4	ಹಲಸಿ	ಅಂಗನವಾಡಿ ಕಟ್ಟಡ ನಿರ್ಮಾಣ.	9.00	ಪ್ರಗತಿಯಲ್ಲಿದೆ
5	ಇಂದಿರಾ ನಗರದಲ್ಲಿ	ಬೀದಿ ದೀಪ ಮತ್ತು ವಿದ್ಯುತ್ ಸಂಪರ್ಕ ಜೋಡಣೆ.	12.00	ಪ್ರಗತಿಯಲ್ಲಿದೆ
6	ಜುಂಜವಾಡ ಕೆ.ಎನ್.	ಸಿಮೆಂಟ್ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ.	18.50	ಮುಕ್ತಾಯಗೊಂಡಿದೆ
7	ಕುಟಿನೋ ನಗರ	ಸಿ.ಸಿ.ರಸ್ತೆ ನಿರ್ಮಾಣ.	25.00	ಪ್ರಗತಿಯಲ್ಲಿದೆ
8	ಕಾಟಗಾಳಿ	ಸಿ.ಸಿ.ರಸ್ತೆ ನಿರ್ಮಾಣ.	17.00	ಪ್ರಗತಿಯಲ್ಲಿದೆ
9	ಕಾಟಗಾಳಿ	ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು	6.00	ಪ್ರಗತಿಯಲ್ಲಿದೆ
10	ತೀರ್ಥಕುಂಡೆ	ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	37.00	ಪ್ರಗತಿಯಲ್ಲಿದೆ
		ಒಟ್ಟು	185.00	

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಅವಿನಾಶ್ ಉಮೇಶ್ ಜಾಧವ್.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	:	254
ಉತ್ತರಿಸಬೇಕಾದ ಸಚಿವರು	:	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ	:	21-09-2020

ಅ	ಹೈದರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿರುವ ಕೃಷಿ ವಿಸ್ತರಣಾ ಕೇಂದ್ರಗಳ ಸಂಖ್ಯೆ ಎಷ್ಟು; ಅವು ಯಾವವು;	ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿರುವ ಕೃಷಿ ವಿಸ್ತರಣಾ ಕೇಂದ್ರಗಳ ಸಂಖ್ಯೆ ಒಟ್ಟು - **06.**

ಕ್ರ.ಸಂ	ಕೃಷಿ ವಿಸ್ತರಣಾ ಕೇಂದ್ರಗಳ ಹೆಸರು	ತಾಲೂಕು	ಜಿಲ್ಲೆ
1	ಕೃಷಿ ವಿಸ್ತರಣಾ ಕೇಂದ್ರ, ಹೂವಿನ ಹಡಗಲಿ	ಹೂವಿನ ಹಡಗಲಿ	ಬಳ್ಳಾರಿ
2	ಕೃಷಿ ವಿಸ್ತರಣಾ ಕೇಂದ್ರ, ಭೀಮರಾಯನಗುಡಿ.	ಶಹಾಪೂರ	ಯಾದಗಿರಿ
3	ಕೃಷಿ ವಿಸ್ತರಣಾ ಕೇಂದ್ರ, ಲಿಂಗಸುಗೂರು	ಲಿಂಗಸುಗೂರು	ರಾಯಚೂರು
4	ಕೃಷಿ ವಿಸ್ತರಣಾ ಕೇಂದ್ರ, ಕೊಪ್ಪಳ	ಕೊಪ್ಪಳ	ಕೊಪ್ಪಳ
5	ಕೃಷಿ ವಿಸ್ತರಣಾ ಕೇಂದ್ರ, ದೇವದುರ್ಗ	ದೇವದುರ್ಗ	ರಾಯಚೂರು
6	ಕೃಷಿ ವಿಸ್ತರಣಾ ಕೇಂದ್ರ, ನಾಲವಾರ	ಚಿತ್ತಾಪೂರ	ಕಲಬುರ್ಗಿ

ಆ	ಹೈದರಾಬಾದ್ ಕರ್ನಾಟಕ ಭಾಗದ ರೈತರ ಸರ್ವಾಂಗೀಣ ಅಭಿವೃದ್ಧಿಗೆ ಅನುಕೂಲವಾಗುವಂತೆ, ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಸ್ಥಾಪನೆ ಮಾಡಲು	ಬಂದಿದೆ. ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವನ್ನು ಪ್ರಾರಂಭಿಸುವ ಕುರಿತ ವಿಸ್ತೃತ ಯೋಜನಾ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕುಲಸಚಿವರು, ಕೃವಿವಿ ರಾಯಚೂರು ಇವರನ್ನು ಕೋರಲಾಗಿದೆ. ಅವರಿಂದ ವರದಿಯನ್ನು ನಿರೀಕ್ಷಿಸಲಾಗಿದೆ.

	ಪ್ರಸ್ತಾವನೆ ಸಲ್ಲಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?	

ಸಂಖ್ಯೆ: AGRI/31/AUR/2020

(ಬಿ.ಸಿ. ಪಾಟೀಲ)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**257**
ಉತ್ತರಿಸಬೇಕಾದ ದಿನಾಂಕ	:	21.09.2020
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಹೊಳೇನರಸೀಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಹರದನಹಳ್ಳಿ ಗ್ರಾಮದಲ್ಲಿ ವಾಸಿಸಲು ಮನೆ ಇಲ್ಲದೆ ತೊಂದರೆ ಪಡುತ್ತಿರುವ ಸಾಮಾನ್ಯ ವರ್ಗ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ 13 ಕುಟುಂಬಗಳು ಹಾಗೂ ಪರಿಶಿಷ್ಟ ಜಾತಿಯ 7 ಕುಟುಂಬಗಳು ಸೇರಿ ಒಟ್ಟು 20 ಕುಟುಂಬದವರಿಗೆ ವಿಶೇಷ ಪ್ರಕರಣದಡಿಯಲ್ಲಿ ಮನೆಯನ್ನು ಮಂಜೂರು ಮಾಡಲು ಜಿಲ್ಲಾಧಿಕಾರಿಗಳು ರಾಜೀವ್ ಗಾಂಧಿ ವಸತಿ ನಿಗಮದ ಮುಖೇನ ಸರ್ಕಾರಕ್ಕೆ ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಸರ್ಕಾರದ ಗಮನಕ್ಕೆ ಬಂದಿದೆ.
(ಆ)	ಹಾಗಿದ್ದಲ್ಲಿ ಸದರಿ ಕುಟುಂಬಗಳಿಗೆ ವಿಶೇಷ ಪ್ರಕರಣದಡಿಯಲ್ಲಿ ಮನೆಯನ್ನು ಮಂಜೂರು ಮಾಡುವ ಪ್ರಸ್ತಾವನೆಗೆ ಅನುಮೋದನೆಗೆ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ಹಾಗೂ ಪ್ರಸ್ತಾವನೆಯು ಯಾವ ಹಂತದಲ್ಲಿದೆ(ಸಂಪೂರ್ಣ ಮಾಹಿತಿ ನೀಡುವುದು) ?	ಪ್ರಸ್ತುತ ಇರುವ ನೀತಿಯಂತೆ ವಸತಿ ಯೋಜನೆಯಡಿ ಪ್ರತಿ ಮನೆಗೆ ರೂ.1,20,000 ರಿಂದ ರೂ.2,00,000 ನೀಡಲಾಗುತ್ತಿದೆ. ಸದರಿ ಪ್ರಸ್ತಾವನೆಯಲ್ಲಿ ಪ್ರತಿ ಮನೆಗೆ ರೂ.5,00,000 ಗಳನ್ನು ವಿಶೇಷ ಪ್ರಕರಣದಡಿ ನೀಡುವಂತೆ ಕೋರಿರುತ್ತಾರೆ. ಅದರಂತೆ ನೀಡಬೇಕಾದಲ್ಲಿ, ಸರ್ಕಾರವು ನೀತಿ ಬದಲಾವಣೆ ಮಾಡಬೇಕಾಗುತ್ತದೆ. ಅದ್ದರಿಂದ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿರುವುದಿಲ್ಲ.

ಸಂಖ್ಯೆ :ವಇ 256 ಹೆಚ್‌ಎಎಂ 2020

(ವಿ. ಸೋಮಣ್ಣ)
ವಸತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ.ಖಾದರ್.ಯು.ಟಿ. (ಮಂಗಳೂರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**262**
ಉತ್ತರಿಸಬೇಕಾದ ದಿನಾಂಕ	:	21.09.2020
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ	ಪ್ರಶ್ನೆ	**ಉತ್ತರ**
(ಅ)	2019-2020ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಮನೆಗಳ ನಿರ್ಮಾಣಕ್ಕಾಗಿ ಮಂಜೂರು ಮಾಡಿ ಬಿಡುಗಡೆ ಮಾಡಿದ ಅನುದಾನವೆಷ್ಟು ? (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)	ಬಸವ ವಸತಿ ಯೋಜನೆಯಡಿ 2019-2020ನೇ ಸಾಲಿನ ಆಯವ್ಯಯದಲ್ಲಿ ರೂ.590.63 ಕೋಟಿಗಳನ್ನು ಮಂಜೂರು ಮಾಡಲಾಗಿದ್ದು, ನಿಗಮದಲ್ಲಿ ಲಭ್ಯವಿದ್ದ ಆರಂಭಿಕ ಶಿಲ್ಕನ್ನು ಒಳಗೊಂಡು ಮನೆಗಳ ಭೌತಿಕ ಪ್ರಗತಿಗನುಗುಣವಾಗಿ ರೂ.813.79ಕೋಟಿಗಳನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
(ಆ)	ಅನುದಾನ ಬಿಡುಗಡೆಯಾಗದೇ ಫಲಾನುಭವಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ವಸತಿ ಯೋಜನೆಗಳಡಿ ಫಲಾನುಭವಿಗಳು ನಿರ್ಮಿಸಿಕೊಂಡಿರುವ ಮನೆಗಳನ್ನು ನಿಗಮವು ಅಭಿವೃದ್ಧಿ ಪಡಿಸಿರುವ "ಇಂದಿರಾ ಮನೆ" ಆ್ಯಪ್ ಮೂಲಕ ಜಿ.ಪಿ.ಎಸ್ ಆಧಾರಿತ ಛಾಯಚಿತ್ರಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಫಲಾನುಭವಿಯಿಂದ ಪಡೆದು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ದೃಢೀಕರಣದ ಆಧಾರದ ಮೇಲೆ ಫಲಾನುಭವಿಗಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ಅನುದಾನವನ್ನು ನೇರವಾಗಿ ಬಿಡುಗಡೆಗೊಳಿಸಲಾಗುತ್ತಿದೆ. ಅನೇಕ ದೂರುಗಳು ಬಂದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ವ ಇ 154 ಹೆಚ್ ಎ ಎಂ 2019, ದಿನಾಂಕ:06.112019ರಲ್ಲಿ ವಿವಿಧ ವಸತಿ ಯೋಜನೆಗಳಡಿ ಪ್ರಗತಿಯಲ್ಲಿರುವ ಮನೆಗಳನ್ನು ಇಂದಿರಾ ಮನೆ ಮೊಬೈಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಜಿ.ಪಿ.ಎಸ್ ಗೆ ಅಳವಡಿಸಿ ಅರ್ಹಗೊಂಡ ನಂತರ ಸದರಿ ಮನೆಗಳ ಪ್ರಗತಿಯನ್ನು ಮತ್ತೊಮ್ಮೆ Geo ಆಧಾರಿತ Vigil App ಮೂಲಕ ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರು ಪರಿಶೀಲಿಸಿ ಅನುಮೋದಿಸಿದ ಅರ್ಹಗೊಂಡ ಮನೆಗಳಿಗೆ ಆಧಾರ್ ಜೋಡಣೆಯಾದ ಫಲಾನುಭವವಿಗಳ ಬ್ಯಾಂಕ್ ಖಾತೆಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ. ಈವರಗೆ ವಿವಿಧ ವಸತಿ ಯೋಜನೆಗಳಡಿ Vigil App ಮೂಲಕ ರೂ.893.07ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
(ಇ)	ಹಾಗಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?	

ಸಂಖ್ಯೆ :ವಇ 257 ಹೆಚ್‌ಎಎಂ 2020

(ವಿ. ಸೋಮಣ್ಣ)
ವಸತಿ ಸಚಿವರು.

LAQ- 262

ಅನುಬಂಧ

2019-20ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನ

ರೂ.ಕೋಟಿಗಳಲ್ಲಿ

ಜಿಲ್ಲೆ	ಕ್ಷೇತ್ರ	ಬಿಡುಗಡೆ ಮಾಡಲಾದ ಅನುದಾನ
ಬಾಗಲಕೋಟೆ	ಬಾದಾಮಿ	6.11
ಬಾಗಲಕೋಟೆ	ಬಾಗಲಕೋಟೆ	2.02
ಬಾಗಲಕೋಟೆ	ಬೀಳಗಿ	4.09
ಬಾಗಲಕೋಟೆ	ಹುನಗುಂದ	4.66
ಬಾಗಲಕೋಟೆ	ಜಮಖಂಡಿ	2.46
ಬಾಗಲಕೋಟೆ	ಮುಧೋಳ	3.78
ಬಾಗಲಕೋಟೆ	ತೇರದಾಳ	1.98
ಬಾಗಲಕೋಟೆ ಒಟ್ಟು		**25.10**
ಬಳ್ಳಾರಿ	ಬಳ್ಳಾರಿ	5.05
ಬಳ್ಳಾರಿ	ಹಡಗಲಿ	5.14
ಬಳ್ಳಾರಿ	ಹಗರಿಬೊಮ್ಮನಹಳ್ಳಿ	7.39
ಬಳ್ಳಾರಿ	ಕಂಪ್ಲಿ	4.51
ಬಳ್ಳಾರಿ	ಕೂಡ್ಲಿಗಿ	6.24
ಬಳ್ಳಾರಿ	ಸಂಡೂರು	4.16
ಬಳ್ಳಾರಿ	ಸಿರಗುಪ್ಪ	4.10
ಬಳ್ಳಾರಿ	ವಿಜಯನಗರ	3.64
ಬಳ್ಳಾರಿ ಒಟ್ಟು		**40.23**
ಬೆಳಗಾವಿ	ಅರಬಾವಿ	9.18
ಬೆಳಗಾವಿ	ಅಥಣಿ	5.59
ಬೆಳಗಾವಿ	ಬೈಲಹೊಂಗಲ	4.84
ಬೆಳಗಾವಿ	ಬೆಳಗಾವಿ ದಕ್ಷಿಣ	1.38
ಬೆಳಗಾವಿ	ಬೆಳಗಾವಿ ಗ್ರಾಮಾಂತರ	4.46
ಬೆಳಗಾವಿ	ಚಿಕ್ಕೋಡಿ-ಸದಲಗ	1.76
ಬೆಳಗಾವಿ	ಗೋಕಾಕ	6.84
ಬೆಳಗಾವಿ	ಹುಕ್ಕೇರಿ	3.89
ಬೆಳಗಾವಿ	ಕಾಗವಾಡ	2.93
ಬೆಳಗಾವಿ	ಖಾನಾಪುರ	3.38
ಬೆಳಗಾವಿ	ಕಿತ್ತೂರು	4.66
ಬೆಳಗಾವಿ	ಕುಡಚಿ	3.62
ಬೆಳಗಾವಿ	ನಿಪ್ಪಾಣಿ	2.38
ಬೆಳಗಾವಿ	ರಾಮದುರ್ಗ	1.84
ಬೆಳಗಾವಿ	ರಾಯಬಾಗ	8.21
ಬೆಳಗಾವಿ	ಸವದತ್ತಿ ಯಲ್ಲಮ್ಮ	4.76
ಬೆಳಗಾವಿ	ಯಮಕನಮರಡಿ	4.57
ಬೆಳಗಾವಿ ಒಟ್ಟು		**74.28**
ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	1.35
ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	2.82
ಬೆಂಗಳೂರು ಗ್ರಾಮಾಂತರ	ಹೊಸಕೋಟೆ	2.66

LAQ- 262

ಅನುಬಂಧ

2019-20ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನ

ರೂ.ಕೋಟಿಗಳಲ್ಲಿ

ಜಿಲ್ಲೆ	ಕ್ಷೇತ್ರ	ಬಿಡುಗಡೆ ಮಾಡಲಾದ ಅನುದಾನ
ಬೆಂಗಳೂರು ಗ್ರಾಮಾಂತರ	ನೆಲಮಂಗಲ	3.06
ಬೆಂಗಳೂರು ಗ್ರಾಮಾಂತರ ಒಟ್ಟು		**9.90**
ಬೆಂಗಳೂರು ನಗರ	ಆನೇಕಲ್	1.16
ಬೆಂಗಳೂರು ನಗರ	ಬೆಂಗಳೂರು ದಕ್ಷಿಣ	0.59
ಬೆಂಗಳೂರು ನಗರ	ಬ್ಯಾಟರಾಯನಪುರ	0.34
ಬೆಂಗಳೂರು ನಗರ	ದಾಸರಹಳ್ಳಿ	0.04
ಬೆಂಗಳೂರು ನಗರ	ಮಹದೇವಪುರ	0.39
ಬೆಂಗಳೂರು ನಗರ	ಯಲಹಂಕ	1.05
ಬೆಂಗಳೂರು ನಗರ	ಯಶವಂತಪುರ	1.65
ಬೆಂಗಳೂರು ನಗರ ಒಟ್ಟು		**5.22**
ಬೀದರ್	ಔರದ್	4.02
ಬೀದರ್	ಬಸವಕಲ್ಯಾಣ	3.55
ಬೀದರ್	ಭಾಲ್ಕಿ	5.57
ಬೀದರ್	ಬೀದರ್	1.06
ಬೀದರ್	ಬೀದರ್ ದಕ್ಷಿಣ	3.02
ಬೀದರ್	ಹುಮ್ನಾಬಾದ್	4.59
ಬೀದರ್ ಒಟ್ಟು		**21.81**
ಚಾಮರಾಜ ನಗರ	ಚಾಮರಾಜನಗರ	4.42
ಚಾಮರಾಜ ನಗರ	ಗುಂಡ್ಲುಪೇಟೆ	4.66
ಚಾಮರಾಜ ನಗರ	ಹನೂರು	8.93
ಚಾಮರಾಜ ನಗರ	ಕೊಳ್ಳೇಗಾಲ	5.56
ಚಾಮರಾಜ ನಗರ ಒಟ್ಟು		**23.57**
ಚಿಕ್ಕಬಳ್ಳಾಪುರ	ಬಾಗೇಪಲ್ಲಿ	2.60
ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	3.48
ಚಿಕ್ಕಬಳ್ಳಾಪುರ	ಚಿಂತಾಮಣಿ	3.06
ಚಿಕ್ಕಬಳ್ಳಾಪುರ	ಗೌರಿಬಿದನೂರು	3.87
ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	3.44
ಚಿಕ್ಕಬಳ್ಳಾಪುರ ಒಟ್ಟು		**16.45**
ಚಿಕ್ಕಮಗಳೂರು	ಚಿಕ್ಕಮಗಳೂರು	2.79
ಚಿಕ್ಕಮಗಳೂರು	ಕಡೂರು	3.80
ಚಿಕ್ಕಮಗಳೂರು	ಮೂಡಿಗೆರೆ	3.57
ಚಿಕ್ಕಮಗಳೂರು	ಶೃಂಗೇರಿ	2.70
ಚಿಕ್ಕಮಗಳೂರು	ತರೀಕೆರೆ	2.29
ಚಿಕ್ಕಮಗಳೂರು ಒಟ್ಟು		**15.15**
ಚಿತ್ರದುರ್ಗ	ಚಳ್ಳಕೆರೆ	3.38
ಚಿತ್ರದುರ್ಗ	ಚಿತ್ರದುರ್ಗ	2.17
ಚಿತ್ರದುರ್ಗ	ಹಿರಿಯೂರು	1.26
ಚಿತ್ರದುರ್ಗ	ಹೊಳಲ್ಕೆರೆ	3.49

LAQ- 262

ಅನುಬಂಧ

2019-20ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನ

ರೂ.ಕೋಟಿಗಳಲ್ಲಿ

ಜಿಲ್ಲೆ	ಕ್ಷೇತ್ರ	ಬಿಡುಗಡೆ ಮಾಡಲಾದ ಅನುದಾನ
ಚಿತ್ರದುರ್ಗ	ಹೊಸದುರ್ಗ	3.60
ಚಿತ್ರದುರ್ಗ	ಮೊಳಕಾಲ್ಮೂರು	4.12
ಚಿತ್ರದುರ್ಗ ಒಟ್ಟು		18.02
ದಕ್ಷಿಣ ಕನ್ನಡ	ಬಂಟ್ವಾಳ	2.57
ದಕ್ಷಿಣ ಕನ್ನಡ	ಬೆಳ್ತಂಗಡಿ	9.54
ದಕ್ಷಿಣ ಕನ್ನಡ	ಮಂಗಳೂರು	0.89
ದಕ್ಷಿಣ ಕನ್ನಡ	ಮಂಗಳೂರು ನಗರ ಉತ್ತರ	0.82
ದಕ್ಷಿಣ ಕನ್ನಡ	ಮೂಡಬಿದ್ರಿ	0.90
ದಕ್ಷಿಣ ಕನ್ನಡ	ಪುತ್ತೂರು	1.89
ದಕ್ಷಿಣ ಕನ್ನಡ	ಸುಳ್ಯ	2.50
ದಕ್ಷಿಣ ಕನ್ನಡ ಒಟ್ಟು		19.11
ದಾವಣಗೆರೆ	ಚನ್ನಗಿರಿ	3.45
ದಾವಣಗೆರೆ	ದಾವಣಗೆರೆ ಉತ್ತರ	1.41
ದಾವಣಗೆರೆ	ದಾವಣಗೆರೆ ದಕ್ಷಿಣ	0.81
ದಾವಣಗೆರೆ	ಹರಪನಹಳ್ಳಿ	3.66
ದಾವಣಗೆರೆ	ಹರಿಹರ	3.28
ದಾವಣಗೆರೆ	ಹೊನ್ನಾಳಿ	5.35
ದಾವಣಗೆರೆ	ಜಗಳೂರು	3.82
ದಾವಣಗೆರೆ	ಮಾಯಕೊಂಡ	5.46
ದಾವಣಗೆರೆ ಒಟ್ಟು		27.25
ಧಾರವಾಡ	ಧಾರವಾಡ	6.85
ಧಾರವಾಡ	ಕಲಘಟಗಿ	9.64
ಧಾರವಾಡ	ಕುಂದಗೋಳ	5.67
ಧಾರವಾಡ	ನವಲಗುಂದ	5.68
ಧಾರವಾಡ ಒಟ್ಟು		27.85
ಗದಗ	ಗದಗ	4.77
ಗದಗ	ನರಗುಂದ	4.60
ಗದಗ	ರೋಣ	3.57
ಗದಗ	ಶಿರಹಟ್ಟಿ	3.63
ಗದಗ ಒಟ್ಟು		16.57
ಹಾಸನ	ಅರಕಲಗೂಡು	10.43
ಹಾಸನ	ಅರಸೀಕೆರೆ	6.19
ಹಾಸನ	ಬೇಲೂರು	6.26
ಹಾಸನ	ಹಾಸನ	1.89
ಹಾಸನ	ಹೊಳೆನರಸೀಪುರ	7.48
ಹಾಸನ	ಸಕಲೇಶಪುರ	5.75
ಹಾಸನ	ಶ್ರವಣಬೆಳಗೊಳ	4.59
ಹಾಸನ ಒಟ್ಟು		42.58

ಅನುಬಂಧ

2019-20ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನ

ರೂ.ಕೋಟಿಗಳಲ್ಲಿ

ಜಿಲ್ಲೆ	ಕ್ಷೇತ್ರ	ಬಿಡುಗಡೆ ಮಾಡಲಾದ ಅನುದಾನ
ಹಾವೇರಿ	ಬ್ಯಾಡಗಿ	6.50
ಹಾವೇರಿ	ಹಾನಗಲ್	7.18
ಹಾವೇರಿ	ಹಾವೇರಿ	7.65
ಹಾವೇರಿ	ಹಿರೇಕೆರೂರು	5.72
ಹಾವೇರಿ	ರಾಣೇಬೆನ್ನೂರು	8.15
ಹಾವೇರಿ	ಶಿಗ್ಗಾಂವ್	5.50
ಹಾವೇರಿ ಒಟ್ಟು		**40.69**
ಕಲಬುರಗಿ	ಅಫ್ಜಲ್‌ಪುರ	4.22
ಕಲಬುರಗಿ	ಆಳಂದ	3.31
ಕಲಬುರಗಿ	ಚಿಂಚೋಳಿ	3.48
ಕಲಬುರಗಿ	ಚಿತ್ತಾಪುರ	2.66
ಕಲಬುರಗಿ	ಜೇವರ್ಗಿ	4.42
ಕಲಬುರಗಿ	ಗುಲ್ಬರ್ಗಾ ದಕ್ಷಿಣ	1.00
ಕಲಬುರಗಿ	ಗುಲ್ಬರ್ಗಾ ಗ್ರಾಮಾಂತರ	1.61
ಕಲಬುರಗಿ	ಸೇಡಂ	4.05
ಕಲಬುರಗಿ ಒಟ್ಟು		**24.74**
ಕೊಡಗು	ಮಡಿಕೇರಿ	2.32
ಕೊಡಗು	ವಿರಾಜಪೇಟೆ	2.68
ಕೊಡಗು ಒಟ್ಟು		**5.00**
ಕೋಲಾರ	ಬಂಗಾರಪೇಟೆ	8.01
ಕೋಲಾರ	ಕೋಲಾರ	3.57
ಕೋಲಾರ	ಕೋಲಾರ ಗೋಲ್ಡ್ ಫೀಲ್ಡ್	6.65
ಕೋಲಾರ	ಮಾಲೂರು	4.29
ಕೋಲಾರ	ಮುಳಬಾಗಲು	5.25
ಕೋಲಾರ	ಶ್ರೀನಿವಾಸಪುರ	4.88
ಕೋಲಾರ ಒಟ್ಟು		**32.65**
ಕೊಪ್ಪಳ	ಗಂಗಾವತಿ	2.38
ಕೊಪ್ಪಳ	ಕನಕಗಿರಿ	5.91
ಕೊಪ್ಪಳ	ಕೊಪ್ಪಳ	2.96
ಕೊಪ್ಪಳ	ಕುಷ್ಟಗಿ	13.00
ಕೊಪ್ಪಳ	ಯಲಬುರ್ಗ	7.63
ಕೊಪ್ಪಳ ಒಟ್ಟು		**31.88**
ಮಂಡ್ಯ	ಕೃಷ್ಣರಾಜಪೇಟೆ	8.65
ಮಂಡ್ಯ	ಮದ್ದೂರು	3.34
ಮಂಡ್ಯ	ಮಳವಳ್ಳಿ	5.49
ಮಂಡ್ಯ	ಮಂಡ್ಯ	3.30
ಮಂಡ್ಯ	ಮೇಲುಕೋಟೆ	4.02
ಮಂಡ್ಯ	ನಾಗಮಂಗಲ	5.21

LAQ- 262

ಅನುಬಂಧ

2019-20ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನ

ರೂ.ಕೋಟಿಗಳಲ್ಲಿ

ಜಿಲ್ಲೆ	ಕ್ಷೇತ್ರ	ಬಿಡುಗಡೆ ಮಾಡಲಾದ ಅನುದಾನ
ಮಂಡ್ಯ	ಶ್ರೀರಂಗಪಟ್ಟಣ	5.00
ಮಂಡ್ಯ ಒಟ್ಟು		35.11
ಮೈಸೂರು	ಚಾಮುಂಡೇಶ್ವರಿ	4.33
ಮೈಸೂರು	ಹೆಗ್ಗಡದೇವನಕೋಟೆ	3.93
ಮೈಸೂರು	ಹುಣಸೂರು	6.04
ಮೈಸೂರು	ಕೃಷ್ಣರಾಜನಗರ	6.24
ಮೈಸೂರು	ನಂಜನಗೂಡು	4.77
ಮೈಸೂರು	ಪಿರಿಯಾಪಟ್ಟಣ	3.73
ಮೈಸೂರು	ಟಿ.ನರಸೀಪುರ	2.60
ಮೈಸೂರು	ವರುಣ	7.52
ಮೈಸೂರು ಒಟ್ಟು		39.16
ರಾಯಚೂರು	ದೇವದುರ್ಗ	1.77
ರಾಯಚೂರು	ಲಿಂಗಸಗೂರು	2.30
ರಾಯಚೂರು	ಮಾನ್ವಿ	2.14
ರಾಯಚೂರು	ಮಸ್ಕಿ	3.35
ರಾಯಚೂರು	ರಾಯಚೂರು	0.65
ರಾಯಚೂರು	ರಾಯಚೂರು ಗ್ರಾಮಾಂತರ	2.26
ರಾಯಚೂರು	ಸಿಂಧನೂರು	2.62
ರಾಯಚೂರು ಒಟ್ಟು		15.07
ರಾಮನಗರ	ಚನ್ನಪಟ್ಟಣ	2.97
ರಾಮನಗರ	ಕನಕಪುರ	4.62
ರಾಮನಗರ	ಮಾಗಡಿ	5.24
ರಾಮನಗರ	ರಾಮನಗರ	5.44
ರಾಮನಗರ ಒಟ್ಟು		18.27
ಶಿವಮೊಗ್ಗ	ಭದ್ರಾವತಿ	2.23
ಶಿವಮೊಗ್ಗ	ಸಾಗರ	5.93
ಶಿವಮೊಗ್ಗ	ಶಿಕಾರಿಪುರ	3.54
ಶಿವಮೊಗ್ಗ	ಶಿವಮೊಗ್ಗ	0.00
ಶಿವಮೊಗ್ಗ	ಶಿವಮೊಗ್ಗ ಗ್ರಾಮಾಂತರ	3.10
ಶಿವಮೊಗ್ಗ	ಸೊರಬ	6.76
ಶಿವಮೊಗ್ಗ	ತೀರ್ಥಹಳ್ಳಿ	4.25
ಶಿವಮೊಗ್ಗ ಒಟ್ಟು		25.81
ತುಮಕೂರು	ಚಿಕ್ಕನಾಯಕನಹಳ್ಳಿ	4.76
ತುಮಕೂರು	ಗುಬ್ಬಿ	4.11
ತುಮಕೂರು	ಕೊರಟಗೆರೆ	15.13
ತುಮಕೂರು	ಕುಣಿಗಲ್	7.10
ತುಮಕೂರು	ಮಧುಗಿರಿ	7.40
ತುಮಕೂರು	ಪಾವಗಡ	6.24

LAQ- 262 ಅನುಬಂಧ

2019-20ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನ

ರೂ.ಕೋಟಿಗಳಲ್ಲಿ

ಜಿಲ್ಲೆ	ಕ್ಷೇತ್ರ	ಬಿಡುಗಡೆ ಮಾಡಲಾದ ಅನುದಾನ
ತುಮಕೂರು	ಸಿರಾ	6.67
ತುಮಕೂರು	ತಿಪಟೂರು	6.77
ತುಮಕೂರು	ತುಮಕೂರು ಗ್ರಾಮಾಂತರ	5.62
ತುಮಕೂರು	ತುರುವೇಕೆರೆ	4.53
ತುಮಕೂರು ಒಟ್ಟು		**68.32**
ಉಡುಪಿ	ಬೈಂದೂರು	2.86
ಉಡುಪಿ	ಕಾಪು	1.56
ಉಡುಪಿ	ಕಾರ್ಕಳ	1.56
ಉಡುಪಿ	ಕುಂದಾಪುರ	2.53
ಉಡುಪಿ	ಉಡುಪಿ	1.19
ಉಡುಪಿ ಒಟ್ಟು		**9.70**
ಉತ್ತರ ಕನ್ನಡ	ಭಟ್ಕಳ	4.27
ಉತ್ತರ ಕನ್ನಡ	ಹಳಿಯಾಳ	10.33
ಉತ್ತರ ಕನ್ನಡ	ಕಾರವಾರ	2.49
ಉತ್ತರ ಕನ್ನಡ	ಕುಮಟ	3.14
ಉತ್ತರ ಕನ್ನಡ	ಶಿರಸಿ	6.08
ಉತ್ತರ ಕನ್ನಡ	ಯಲ್ಲಾಪುರ	8.50
ಉತ್ತರ ಕನ್ನಡ ಒಟ್ಟು		**34.81**
ವಿಜಯಪುರ	ಬಬಲೇಶ್ವರ	6.13
ವಿಜಯಪುರ	ಬಸವನ ಬಾಗೇವಾಡಿ	5.20
ವಿಜಯಪುರ	ದೇವರಹಿಪ್ಪರಗಿ	6.24
ವಿಜಯಪುರ	ಇಂಡಿ	5.70
ವಿಜಯಪುರ	ಮುದ್ದೇಬಿಹಾಳ	3.12
ವಿಜಯಪುರ	ನಾಗಠಾಣ	5.09
ವಿಜಯಪುರ	ಸಿಂಧಗಿ	4.72
ವಿಜಯಪುರ	ಬಿಜಾಪುರ ನಗರ	0.06
ವಿಜಯಪುರ ಒಟ್ಟು		**36.26**
ಯಾದಗಿರಿ	ಗುರ್‌ಮಿಠ್‌ಕಲ್	2.07
ಯಾದಗಿರಿ	ಶಹಾಪುರ್	4.21
ಯಾದಗಿರಿ	ಶೋರಾಪುರ	4.33
ಯಾದಗಿರಿ	ಯಾದಗಿರಿ	2.63
ಯಾದಗಿರಿ ಒಟ್ಟು		**13.23**
ಒಟ್ಟಾರೆ		**813.79**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:		**263**
ಸದಸ್ಯರ ಹೆಸರು	:	ಶ್ರೀ ಖಾದರ್ ಯು.ಟಿ (ಮಂಗಳೂರು)
ಉತ್ತರಿಸಬೇಕಾದ ದಿನಾಂಕ	:	21-09-2020
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) ರಾಜ್ಯಾದ್ಯಂತ ಇತ್ತೀಚಿನ ಮಳೆಯಿಂದಾಗಿ ನೆರೆ ಹಾವಳಿಗೆ ಒಳಗಾದ ಪ್ರದೇಶಗಳು ಯಾವುವು; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)	ರಾಜ್ಯಾದ್ಯಂತ ಇತ್ತೀಚಿನ ಮಳೆಯಿಂದಾಗಿ 23 ಜಿಲ್ಲೆಗಳ 130 ತಾಲ್ಲೂಕುಗಳು ನೆರೆ ಪೀಡಿತವಾಗಿದ್ದು, ಈ ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳು ಎಂದು ಘೋಷಿಸಲಾಗಿರುತ್ತದೆ. (ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)
(ಆ) ನೆರೆ ಹಾವಳಿಯಿಂದ ಹಾನಿಗೊಳಗಾದ ರೈತರಿಗೆ ಸರ್ಕಾರದಿಂದ ಯಾವ ಪರಿಹಾರಗಳನ್ನು ಕಲ್ಪಿಸಲಾಗಿದೆ;	ನೆರೆಹಾವಳಿಯಿಂದ ಶೇ.33 ಕ್ಕಿಂತ ಹೆಚ್ಚಿನ ಬೆಳೆ ಹಾನಿಗೆ ತುತ್ತಾದ ಕೃಷಿಕರಿಗೆ ಕೇಂದ್ರ ಸರ್ಕಾರದ ಎನ್.ಡಿ.ಆರ್.ಎಫ್/ಎಸ್.ಡಿ.ಆರ್.ಎಫ್ ಮಾರ್ಗ ಸೂಚಿಗಳ ಪ್ರಕಾರ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಈ ಕೆಳಕಂಡ ದರದಲ್ಲಿ ಇನ್‌ಪುಟ್ ಸಬ್ಸಿಡಿಯನ್ನು ನೀಡಲಾಗುತ್ತದೆ: • ಮಳೆಯಾಶ್ರಿತ ಬೆಳೆಹಾನಿ-ಪ್ರತಿ ಹೆಕ್ಟೇರ್‌ಗೆ ರೂ.6800/- • ನೀರಾವರಿ ಬೆಳೆಹಾನಿ-ಪ್ರತಿ ಹೆಕ್ಟೇರ್‌ಗೆ ರೂ.13500/- • ಬಹುವಾರ್ಷಿಕ ಬೆಳೆಹಾನಿ-ಪ್ರತಿ ಹೆಕ್ಟೇರ್‌ಗೆ ರೂ.18000/- ನೆರೆಹಾವಳಿ ಹಾಗೂ ಭೂ ಕುಸಿತದಿಂದಾಗಿ ಕೃಷಿಭೂಮಿಯಲ್ಲಿ ಮಣ್ಣು ತುಂಬಿ ಬೆಳೆಹಾನಿಯಾದ ರೈತರಿಗೆ ಈ ಕೆಳಕಂಡಂತೆ ಪರಿಹಾರ ನೀಡಲಾಗುತ್ತದೆ: • ಕೃಷಿ ಭೂಮಿಯಲ್ಲಿ ಮೂರು ಇಂಚುಗಳಿಗಿಂತ ಹೆಚ್ಚಿನ ಮಣ್ಣು ತುಂಬಿದ್ದು, ಇಂತಹ ಅವಶೇಷಗಳನ್ನು ತೆರವುಗೊಳಿಸುವ ಕಾರ್ಯಕ್ಕಾಗಿ ಪ್ರತಿ ಹೆಕ್ಟೇರ್‌ಗೆ ರೂ.12200.00 • ಭೂ ಕುಸಿತ ಹಾಗೂ ನದಿಹರಿವಿನಿಂದಾಗಿ ಕೃಷಿ ಭೂಮಿ ಕಳೆದುಕೊಂಡ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.37500.00

..2

(ಇ) ಕೇಂದ್ರ ಸರ್ಕಾರದಿಂದ ನೆರೆ ಹಾವಳಿಗಾಗಿ ಪರಿಹಾರಧನ ಬಿಡುಗಡೆಯಾಗಿದೆಯೇ;	2020-21ನೇ ಸಾಲಿನಲ್ಲಿ ಈ ವರೆಗೆ ಪ್ರಕೃತಿವಿಕೋಪ ಪರಿಹಾರ ಕಾರ್ಯಗಳಿಗಾಗಿ (ನೆರೆ, ಬರ ಮತ್ತು ಕೋವಿಡ್ ನಿರ್ವಹಣೆ) ಕೇಂದ್ರ ಸರ್ಕಾರದಿಂದ ಎಸ್.ಡಿ.ಆರ್.ಎಫ್ ಅಡಿ ರೂ.791.00 ಕೋಟಿ ಬಿಡುಗಡೆಯಾಗಿರುತ್ತದೆ. ಪ್ರಸ್ತುತ ವರ್ಷ ಆಗಸ್ಟ ಮಾಹೆಯಲ್ಲಿ ಉಂಟಾದ ಪ್ರವಾಹದಿಂದಾದ ಹಾನಿಗೆ ಪರಿಹಾರ ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೋರಂಡಮ್ ಸಲ್ಲಿಸಲಾಗಿದೆ.
(ಈ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರ ನೀಡಿರುವ ಪರಿಹಾರಗಳಾವುವು? (ವಿವರ ಒದಗಿಸುವುದು)	ಮೆಮೊರಂಡಮ್ ನಲ್ಲಿ ಈ ಕೆಳಕಂಡಂತೆ ಅನುದಾನವನ್ನು ಕೋರಲಾಗಿದೆ. ಅಂದಾಜು ಹಾನಿಯ ಮೊತ್ತ: ರೂ.9440.85 ಕೋಟಿ SDRF ಮಾರ್ಗಸೂಚಿಗಳ ಪ್ರಕಾರ: ರೂ.755.69 ಕೋಟಿ.

ಕಂಇ 413 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಯು.ಟಿ. ಖಾದರ್ (ಮಂಗಳೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:263ಕ್ಕೆ ಅನುಬಂಧ

ಆಗಸ್ಟ್ 2020ರ ಮಾಹೆಯಲ್ಲಿ ರಾಜ್ಯದಲ್ಲಿನ 23 ಜಿಲ್ಲೆಗಳ 130 ತಾಲ್ಲೂಕುಗಳನ್ನು ಅತಿವೃಷ್ಟಿ/ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಿರುವ ಪಟ್ಟಿ.

ಕ್ರ.ಸಂ.	ಜಿಲ್ಲೆ	ಕ್ರ.ಸಂ.	ತಾಲ್ಲೂಕು
1	ದಾವಣಗೆರೆ	1	ಹರಿಹರ
		2	ಹೊನ್ನಾಳಿ
		3	ನ್ಯಾಮತಿ
2	ಚಾಮರಾಜನಗರ	4	ಕೊಳ್ಳೇಗಾಲ
3	ಮಂಡ್ಯ	5	ಕೃಷ್ಣರಾಜಪೇಟೆ
4	ಮೈಸೂರು	6	ಹುಣಸೂರು
		7	ಕೆ.ಆರ್. ನಗರ
		8	ಮೈಸೂರು
		9	ಪಿರಿಯಾಪಟ್ಟಣ
5	ಬಳ್ಳಾರಿ	10	ಹಡಗಲಿ
		11	ಹೊಸಪೇಟೆ
		12	ಹಗರಿಬೊಮ್ಮನಹಳ್ಳಿ
		13	ಸಿರಗುಪ್ಪ
		14	ಹರಪನಹಳ್ಳಿ
		15	ಕಂಪ್ಲಿ
6	ಕೊಪ್ಪಳ	16	ಗಂಗಾವತಿ
		17	ಕೊಪ್ಪಳ
		18	ಕಾರಟಗಿ
7	ರಾಯಚೂರು	19	ದೇವದುರ್ಗ
		20	ಲಿಂಗಸುಗೂರು
		21	ಮಾನ್ವಿ
		22	ರಾಯಚೂರು
		23	ಸಿಂಧನೂರು
8	ಕಲಬುರ್ಗಿ	24	ಅಫ್ಜಲ್‌ಪುರ
		25	ಆಳಂದ
		26	ಚಿತ್ತಾಪುರ
		27	ಕಲಬುರ್ಗಿ
		28	ಜೇವರ್ಗಿ
		29	ಸೇಡಂ
		30	ಕಾಳಗಿ
		31	ಕಮಲಾಪುರ
		32	ಶಹಾಬಾದ್
9	ಯಾದಗಿರಿ	33	ಶಹಾಪುರ
		34	ಹುಣಸಗಿ
		35	ಶೋರಾಪುರ
		36	ವಡಗೇರಾ
		37	ಯಾದಗಿರಿ

ಕ್ರ.ಸಂ.	ಜಿಲ್ಲೆ	ಕ್ರ.ಸಂ.	ತಾಲ್ಲೂಕು
10	ಬೀದರ್	38	ಔರಾದ್
		39	ಬೀದರ್
		40	ಬಾಲ್ಕಿ
		41	ಬಸವಕಲ್ಯಾಣ
		42	ಹುಮ್ನಾಬಾದ್
11	ಬೆಳಗಾವಿ	43	ಅಥಣಿ
		44	ಬೈಲಹೊಂಗಲ
		45	ಬೆಳಗಾವಿ
		46	ಚಿಕ್ಕೋಡಿ
		47	ಗೋಕಾಕ್
		48	ಹುಕ್ಕೇರಿ
		49	ಕಾಗವಾಡ
		50	ಖಾನಾಪುರ
		51	ಕಿತ್ತೂರು
		52	ಮೂಡಲಗಿ
		53	ನಿಪ್ಪಾಣಿ
		54	ರಾಯಭಾಗ
		55	ರಾಮದುರ್ಗ
		56	ಸವದತ್ತಿ
12	ಬಾಗಲಕೋಟೆ	57	ಬಾದಾಮಿ
		58	ಬಾಗಲಕೋಟೆ
		59	ಬೀಳಗಿ
		60	ಗುಳೇದಗುಡ್ಡ
		61	ಹುನಗುಂದ
		62	ಇಳಕಲ್
		63	ಜಮಖಂಡಿ
		64	ಮುಧೋಳ
		65	ರಬಕವಿ ಬನಹಟ್ಟಿ
13	ವಿಜಯಪುರ	66	ಬಬಲೇಶ್ವರ
		67	ಕೊಲ್ಹಾರ
		68	ಮುದ್ದೇಬಿಹಾಳ
		69	ನಿಡಗುಂದಿ
14	ಗದಗ	70	ಮುಂಡರಗಿ
		71	ನರಗುಂದ
		72	ರೋಣ
		73	ಶಿರಹಟ್ಟಿ
15	ಹಾವೇರಿ	74	ಹಾನಗಲ್
		75	ಹಾವೇರಿ
		76	ಹಿರೇಕೆರೂರು
		77	ರಾಣೆಬೆನ್ನೂರು
		78	ರಟ್ಟೆಹಳ್ಳಿ
		79	ಶಿಗ್ಗಾಂವ

ಕ್ರ.ಸಂ.	ಜಿಲ್ಲೆ	ಕ್ರ.ಸಂ.	ತಾಲ್ಲೂಕು
16	ಧಾರವಾಡ	80	ಅಳ್ನಾವರ
		81	ಧಾರವಾಡ
		82	ಹುಬ್ಬಳ್ಳಿ
		83	ಹುಬ್ಬಳ್ಳಿ ನಗರ
		84	ಕಲಘಟಗಿ
		85	ಕುಂದಗೋಳ
		86	ನವಲಗುಂದ
17	ಶಿವಮೊಗ್ಗ	87	ಭದ್ರಾವತಿ
		88	ಹೊಸನಗರ
		89	ಸಾಗರ
		90	ಶಿಕಾರಿಪುರ
		91	ಶಿವಮೊಗ್ಗ
		92	ಸೊರಬ
		93	ತೀರ್ಥಹಳ್ಳಿ
18	ಹಾಸನ	94	ಆಲೂರು
		95	ಅರಕಲಗೂಡು
		96	ಬೇಲೂರು
		97	ಹಾಸನ
		98	ಸಕಲೇಶಪುರ
19	ಚಿಕ್ಕಮಗಳೂರು	99	ಚಿಕ್ಕಮಗಳೂರು
		100	ಕೊಪ್ಪ
		101	ಮೂಡಿಗೆರೆ
		102	ನರಸಿಂಹರಾಜಪುರ
		103	ಶೃಂಗೇರಿ
		104	ತರೀಕೆರೆ
20	ಕೊಡಗು	105	ಮಡಿಕೇರಿ
		106	ಸೋಮವಾರಪೇಟೆ
		107	ವಿರಾಜಪೇಟೆ
21	ದಕ್ಷಿಣ ಕನ್ನಡ	108	ಬಂಟ್ವಾಳ
		109	ಬೆಳ್ತಂಗಡಿ
		110	ಕಡಬ
		111	ಮಂಗಳೂರು
		112	ಮೂಡಬಿದಿರೆ
		113	ಪುತ್ತೂರು
22	ಉಡುಪಿ	114	ಬೈಂದೂರು
		115	ಬ್ರಹ್ಮಾವರ
		116	ಹೆಬ್ರಿ
		117	ಕಾಪು
		118	ಕಾರ್ಕಳ
		119	ಕುಂದಾಪುರ
		120	ಉಡುಪಿ

ಕ್ರ.ಸಂ.	ಜಿಲ್ಲೆ	ಕ್ರ.ಸಂ.	ತಾಲ್ಲೂಕು
23	ಉತ್ತರ ಕನ್ನಡ	121	ಅಂಕೋಲ
		122	ಭಟ್ಕಳ
		123	ಹೊನ್ನಾವರ
		124	ಕಾರವಾರ
		125	ಕುಮಟಾ
		126	ಮುಂಡಗೋಡು
		127	ಸಿದ್ದಾಪುರ
		128	ಶಿರಸಿ
		129	ಸೂಪ
		130	ಯಲ್ಲಾಪುರ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 264
ಮಾನ್ಯ ಸದಸ್ಯರ ಹೆಸರು	: ಶ್ರೀ ಖಾದರ್ ಯು.ಟಿ. (ಮಂಗಳೂರು)
ಉತ್ತರಿಸುವ ದಿನಾಂಕ	: 21.09.2020
ಉತ್ತರಿಸುವ ಸಚಿವರು	: ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿಧಾನಸಭಾ ಕ್ಷೇತ್ರದ ಸೋಮೇಶ್ವರ – ಉಚ್ಚಿಲ ರಸ್ತೆಗಳು ಕಡಲ ಕೊರೆತದಿಂದ ಸಂಪೂರ್ಣವಾಗಿ ಹಾಳಾಗಿ ಸಂಚಾರಕ್ಕೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.	ಬಂದಿದೆ
ಆ)	ಹಾಗಿದ್ದಲ್ಲಿ, ಈ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)	ಸದರಿ ರಸ್ತೆಯ ಸರಪಳಿ 0.600 ಕಿ.ಮೀ ರಿಂದ 1.000 ಕಿ.ಮೀ ವರೆಗೆ 400 ಮೀ. ಉದ್ದಕ್ಕೆ ರಸ್ತೆಗೆ ಹಾನಿಯಾಗಿರುತ್ತದೆ. ಮಂಗಳೂರು ತಾಲ್ಲೂಕಿನ ಸೋಮೇಶ್ವರ - ಉಚ್ಚಿಲ ಕಡಲು ತೀರದಲ್ಲಿ ಸಮುದ್ರ ಕೊರೆತ ಸಂಭಾವ್ಯ ಪ್ರದೇಶಗಳ ಒಟ್ಟು 1225 ಮೀ. ರಸ್ತೆ ಉದ್ದದ ತಾತ್ಕಾಲಿಕ ಸಂರಕ್ಷಣಾ ತುರ್ತು ಕಾಮಗಾರಿಯ ಕುರಿತು ಈಗಾಗಲೇ ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ. ಕೋವಿಡ್-19 ಪ್ರಯುಕ್ತ ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದು.

ಕಡತ ಸಂಖ್ಯೆ: IDD 19 PSP 2020 (E-340272)

(ಕೋಟ ಶ್ರೀನಿವಾಸ ಪೂಜಾರಿ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **265**
ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ : 21-09-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಸಕ್ತ ವರ್ಷ ಅತಿ ವೃಷ್ಟಿಯಿಂದ ಆದ ನಷ್ಟವೆಷ್ಟು; (ಇಲಾಖಾವಾರು ವಿವರ ನೀಡುವುದು)</td><td>2020ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಈ ಕೆಳಕಂಡಂತೆ ಹಾನಿಯಾಗಿರುತ್ತದೆ.
<table>
<tr><th>ಕ್ರ ಸಂ</th><th>ಇಲಾಖೆ</th><th>ಅಂದಾಜು ಹಾನಿಯ ಪ್ರಮಾಣ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>ಪಂಚಾಯತ್ ರಾಜ್ ಇಲಾಖೆ</td><td>7724.19</td></tr>
<tr><td>2</td><td>ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.</td><td>1519.00</td></tr>
<tr><td>3</td><td>ಸಣ್ಣ ನೀರಾವರಿ ಇಲಾಖೆ</td><td>925.00</td></tr>
<tr><td>4</td><td>ಮೆಸ್ಕಾಂ</td><td>121.96</td></tr>
<tr><td>5</td><td>ನಗರ/ಸ್ಥಳೀಯ ಸಂಸ್ಥೆ</td><td>29.00</td></tr>
<tr><td>6</td><td>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ</td><td>0.30</td></tr>
<tr><td>7</td><td>ಕೃಷಿ ಇಲಾಖೆ</td><td>579.70 ಹೆಕ್ಟೇರ್</td></tr>
<tr><td>8</td><td>ತೋಟಗಾರಿಕೆ ಇಲಾಖೆ</td><td>1057.99 ಹೆಕ್ಟೇರ್</td></tr>
<tr><td>9</td><td>ಕಾಫಿ ಮಂಡಳಿ</td><td>4300.00 ಹೆಕ್ಟೇರ್</td></tr>
</table></td></tr>
<tr><td>(ಆ) ಹಾಗಿದ್ದಲ್ಲಿ, ನಷ್ಟದ ಪರಿಹಾರವಾಗಿ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನವೆಷ್ಟು; (ಇಲಾಖಾವಾರು ವಿವರ ನೀಡುವುದು)</td><td rowspan="2">2020ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಉಂಟಾದ ಹಾನಿಗೆ ಕೇಂದ್ರ ಸರ್ಕಾರದ ಆರ್ಥಿಕ ನೆರವು ಕೋರಿ ಮೆಮೋರಂಡಮ್ ಸಲ್ಲಿಸಲಾಗಿದ್ದು, ಆರ್ಥಿಕ ನೆರವನ್ನು ನಿರೀಕ್ಷಿಸಲಾಗಿದೆ.</td></tr>
<tr><td>(ಇ) ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿದೆ;</td></tr>
</table>

(ಈ) ಅತಿವೃಷ್ಟಿಯಿಂದ ಸಂಭವಿಸಿದ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	• ತೀವ್ರ ಮಳೆಯಿಂದ ಸಂಭವಿಸಿದ ಮಾನವ ಹಾಗೂ ಜಾನುವಾರು ಹಾನಿಗೆ ಸಂಬಂಧಿಸಿದಂತೆ ಸಂತ್ರಸ್ಥರಿಗೆ ತ್ವರಿತವಾಗಿ ಪರಿಹಾರವನ್ನು ನೀಡಲಾಗಿದೆ. • ಬೆಳೆಹಾನಿ ಬಗ್ಗೆ ನಿಖರವಾಗಿ ಜಂಟಿ ತನಿಖೆ ನಡೆಸಿ ಸೂಕ್ತಾನುಸಾರ ಪರಿಹಾರ ತಂತ್ರಾಂಶದಲ್ಲಿ ಅಳವಡಿಸಿ ಪರಿಹಾರ ಪಾವತಿಸುವ ಬಗ್ಗೆ ಕ್ರಮವಹಿಸ ಲಾಗುತ್ತಿದೆ. • ಮನೆಗಳ ಹಾನಿಗೆ ಸಂಬಂಧಿಸಿದಂತೆ ನಿಖರವಾದ ಸ್ಥಳ ಪರಿಶೀಲನೆ ನಡೆಸಿ ಆರ್.ಜಿ.ಆರ್.ಹೆಚ್.ಸಿ.ಎಲ್ ತಂತ್ರಾಂಶದಲ್ಲಿ ವಿವರವನ್ನು ದಾಖಲಿಸಿ ಸೂಕ್ತಾನುಸಾರ ಪರಿಹಾರ ಪಾವತಿಸಲು ಕ್ರಮವಹಿಸ ಲಾಗುತ್ತಿದೆ. • ಉಳಿದಂತೆ ರಸ್ತೆ, ಸೇತುವೆ ಇತ್ಯಾದಿ ಸಾರ್ವಜನಿಕ ಆಸ್ತಿಗಳ ಹಾನಿ ಬಗ್ಗೆ ಅನುದಾನ ಬಿಡುಗಡೆಯಾದಂತೆ ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ಪರಿಹಾರ ಕ್ರಮವಹಿಸಲಾಗುತ್ತಿದೆ.

ಕಂಇ 414 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**268**
ಉತ್ತರಿಸಬೇಕಾದ ದಿನಾಂಕ	:	21.09.2020
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಶೃಂಗೇರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿಗೊಳಗಾದವರಿಗೆ ಮಂಜೂರಾತಿ ನೀಡಲಾಗಿದೆಯೇ;	ಹೌದು.
(ಆ)	ಮಂಜೂರಾತಿ ನೀಡಲಾಗಿರುವ ಹಾಗೂ ಬಾಕಿ ಇರುವ ಮನೆಗಳೆಷ್ಟು; (ತಾಲ್ಲೂಕುವಾರು ಫಲಾನುಭವಿಗಳ ಅಂಕಿ-ಅಂಶ ವಿವರ ನೀಡುವುದು)	ಶೃಂಗೇರಿ ವಿಧಾನಸಭಾ ಕ್ಷೇತ್ರುದಲ್ಲಿ 2019ನೇ ಸಾಲಿನಲ್ಲಿ ಉಂಟಾದ ಭಾರಿ ಮಳೆಯಿಂದಾಗಿ ಒಟ್ಟು 512 ಮನೆಗಳು ಹಾನಿಗೊಳಗಾಗಿದ್ದು, ಹಾನಿಗೊಳಗಾದ ಮನೆಗಳಿಗೆ ಜಿಲ್ಲಾಧಿಕಾರಿಗಳು ಅನುಮೋದನೆಯನ್ನು ನೀಡಿದ್ದು, ವರ್ಗವಾರು ವಿವರಗಳು ಇಂತಿದೆ.

ಮನೆ ಹಾನಿಗೊಳಗಾದ ವರ್ಗ		ಜಿಲ್ಲಾಧಿಕಾರಿಗಳು ಆಯ್ಕೆ ಮಾಡಿರುವ ಒಟ್ಟು ಸಂತ್ರಸ್ಥರು
ಸಂಪೂರ್ಣ	ಅಧಿಕೃತ	85
	ಅನಧಿಕೃತ	4
ಭಾಗಶಃ (ಪುನರ್ ನಿರ್ಮಾಣ)	ಅಧಿಕೃತ	114
	ಅನಧಿಕೃತ	3
ಭಾಗಶಃ (ದುರಸ್ತಿ)	ಅಧಿಕೃತ	64
	ಅನಧಿಕೃತ	0
ಅಲ್ಪಸ್ವಲ್ಪ	ಅಧಿಕೃತ	226
	ಅನಧಿಕೃತ	16
ಒಟ್ಟು		512

ಶೃಂಗೇರಿ ವಿಧಾನಸಭಾ ಕ್ಷೇತ್ರುದಲ್ಲಿ ಜಿಲ್ಲಾಧಿಕಾರಿಗಳು ಆಯ್ಕೆ ಮಾಡಿರುವ ತಾಲ್ಲೂಕುವಾರು ಫಲಾನುಭವಿಗಳ ಅಂಕಿ-ಅಂಶಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ವಇ 258 ಹೆಚ್‌ಎಎಂ 2020

(ವಿ. ಸೋಮಣ್ಣ)
ವಸತಿ ಸಚಿವರು.

LAQ-268

ಅನುಬಂಧ

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ 2019ನೇ ಸಾಲಿನ ನೆರೆಸಂತ್ರಸ್ಥರ ಪುನರ್ ವಸತಿ ಯೋಜನೆಯಡಿ ಜಿಲ್ಲಾಧಿಕಾರಿಗಳು ಅನುಮೋದನೆ ನೀಡಿರುವ ತಾಲ್ಲೂಕುವಾರು ಫಲಾನುಭವಿಗಳ ಅಂಕಿ ಅಂಶ

ತಾಲ್ಲೂಕು	ಒಟ್ಟು ಫಲಾನುಭವಿಗಳು	ವರ್ಗ
ಕೊಪ್ಪ	1	ಸಂಪೂರ್ಣ-ಅನಧಿಕೃತ
ಕೊಪ್ಪ	9	ಸಂಪೂರ್ಣ-ಅಧಿಕೃತ
ಕೊಪ್ಪ	22	ಭಾಗಶಃ (ಪುನರ್ ನಿರ್ಮಾಣ)-ಅಧಿಕೃತ
ಕೊಪ್ಪ	18	ಭಾಗಶಃ (ದುರಸ್ಥಿ)-ಅಧಿಕೃತ
ಕೊಪ್ಪ	71	ಅಲ್ಪಸ್ವಲ್ಪ-ಅಧಿಕೃತ
ಕೊಪ್ಪ Total	121	
ಕೊಪ್ಪ TP	1	ಅಲ್ಪಸ್ವಲ್ಪ-ಅಧಿಕೃತ
ಕೊಪ್ಪ TP Total	1	
ಚಿಕ್ಕಮಗಳೂರು	13	ಸಂಪೂರ್ಣ-ಅಧಿಕೃತ
ಚಿಕ್ಕಮಗಳೂರು	9	ಭಾಗಶಃ (ಪುನರ್ ನಿರ್ಮಾಣ)-ಅಧಿಕೃತ
ಚಿಕ್ಕಮಗಳೂರು	19	ಭಾಗಶಃ (ದುರಸ್ಥಿ)-ಅಧಿಕೃತ
ಚಿಕ್ಕಮಗಳೂರು	37	ಅಲ್ಪಸ್ವಲ್ಪ-ಅಧಿಕೃತ
ಚಿಕ್ಕಮಗಳೂರು Total	78	
ನರಸಿಂಹರಾಜಪುರ	3	ಸಂಪೂರ್ಣ-ಅನಧಿಕೃತ
ನರಸಿಂಹರಾಜಪುರ	51	ಸಂಪೂರ್ಣ-ಅಧಿಕೃತ
ನರಸಿಂಹರಾಜಪುರ	2	ಭಾಗಶಃ (ಪುನರ್ ನಿರ್ಮಾಣ)-ಅನಧಿಕೃತ
ನರಸಿಂಹರಾಜಪುರ	70	ಭಾಗಶಃ (ಪುನರ್ ನಿರ್ಮಾಣ)-ಅಧಿಕೃತ
ನರಸಿಂಹರಾಜಪುರ	13	ಭಾಗಶಃ (ದುರಸ್ಥಿ)-ಅಧಿಕೃತ
ನರಸಿಂಹರಾಜಪುರ	7	ಅಲ್ಪಸ್ವಲ್ಪ-ಅನಧಿಕೃತ
ನರಸಿಂಹರಾಜಪುರ	57	ಅಲ್ಪಸ್ವಲ್ಪ-ಅಧಿಕೃತ
ನರಸಿಂಹರಾಜಪುರ Total	203	
ನರಸಿಂಹರಾಜಪುರ TP	9	[illegible]-ಅಧಿಕೃತ
ನರಸಿಂಹರಾಜಪುರ TP	6	[illegible]ತ
ನರಸಿಂಹರಾಜಪುರ TP	7	[illegible]
ನರಸಿಂಹರಾಜಪುರ TP Total	22	
ಶೃಂಗೇರಿ	11	[illegible]
ಶೃಂಗೇರಿ	1	[illegible]
ಶೃಂಗೇರಿ	1[illegible]	[illegible]
ಶೃಂಗೇರಿ	[illegible]	[illegible]
ಶೃಂಗೇರಿ	[illegible]	[illegible]
ಶೃಂಗೇರಿ	[illegible]	[illegible]
ಶೃಂಗೇರಿ Total	[illegible]	
ಶೃಂಗೇರಿ TP	[illegible]	[illegible]
ಶೃಂಗೇರಿ TP	[illegible]	[illegible]
ಶೃಂಗೇರಿ TP	[illegible]	[illegible]
ಶೃಂಗೇರಿ TP Total	[illegible]	
Grand Total	[illegible]	

File No.AGRI-AEE/104/2020-AGRI-PLAN-B-AGRICULTURE Secretariat

LAQ-270

ಕರ್ನಾಟಕ ಸರ್ಕಾರ

ಸಂ: ಕೃಇ 104 ಕೃಕೈಉ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:21.09.2020.

u-S
203
21/9

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ), ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:270ಕ್ಕೆ ಉತ್ತರವನ್ನು ಒದಗಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ), ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:270ಕ್ಕೆ ಉತ್ತರದ ಸಾಫ್ಟ್ ಪ್ರತಿಗಳನ್ನು ಇ-ಮೇಲ್ ಐಡಿ: dsqb-kla-kar@nic.in ಗೆ ಕಳುಹಿಸಲಾಗಿದೆ ಹಾಗೂ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

21/09/2020
(ಎನ್.ರಾಜೇಶ್ವರಿ)
ಶಾಖಾಧಿಕಾರಿ,
ಕೃಷಿ ಇಲಾಖೆ (ಯೋಜನೆ-ಬಿ ಶಾಖೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 270

ಮಾನ್ಯ ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)

ಉತ್ತರಿಸಬೇಕಾದ ದಿನಾಂಕ: : 21.09.2020

ಉತ್ತರಿಸುವ ಮಾನ್ಯ ಸಚಿವರು : ಮಾನ್ಯ ಕೃಷಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೃಷಿ ಕ್ಷೇತ್ರದಲ್ಲಿನ ಸಮಗ್ರ ಅಭಿವೃದ್ಧಿ ಮತ್ತು ಕೃಷಿ ವಲಯ ಸುಸ್ಥಿರವಾಗಿರುವಂತೆ ಕ್ರಮ ಜರುಗಿಸುವ ನಿಟ್ಟಿನಲ್ಲಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕ್ರಮಗಳೇನು;	ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಮತ್ತು ಕೃಷಿ ವಲಯ ಸುಸ್ಥಿರವಾಗಿರುವಂತೆ ಕ್ರಮ ಜರುಗಿಸುವ ನಿಟ್ಟಿನಲ್ಲಿ ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಗಳನ್ನು ಕೃಷಿ ಇಲಾಖೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗಳಲ್ಲಿ ಬೀಜ ವಿತರಣೆ, ಮಣ್ಣಿನ ಸತ್ವ ಹೆಚ್ಚಿಸುವಿಕೆ, ಸಾವಯವ ಕೃಷಿ ಯೋಜನೆ, ಕೇಂದ್ರ ಪುರಸ್ಕೃತ ಯೋಜನೆಗಳು ಪ್ರಮುಖವಾಗಿರುತ್ತದೆ. ಇವುಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಅಡಿಯಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಚಟುವಟಿಕೆಗಳಾದ ಪ್ರಮಾಣೀಕೃತ ಬೀಜ ವಿತರಣೆ, ಪ್ರಮಾಣೀಕೃತ ಬೀಜ ಉತ್ಪಾದನೆ, ಸಮಗ್ರ ಪೋಷಕಾಂಶ ವಿತರಣೆ , ಸಮಗ್ರ ಪೀಡೆ ನಿರ್ವಹಣೆ, ಆಧುನಿಕ ಯಂತ್ರೋಪಕರಣಗಳ ವಿತರಣೆ, ತರಬೇತಿ ಇತ್ಯಾದಿ ಘಟಕಗಳನ್ನು ಅಕ್ಕಿ, ದ್ವಿದಳಧಾನ್ಯ, ಒರಟುಧಾನ್ಯ (ಮುಸುಕಿನ ಜೋಳ) ಮತ್ತು ನ್ಯೂಟ್ರಿಸಿರಿಧಾನ್ಯಗಳು, ಹತ್ತಿ, ಕಬ್ಬು, ಎಣ್ಣೆಕಾಳು ಬೆಳೆಗಳಲ್ಲಿ ಉತ್ಪಾದಕತೆ ಹೆಚ್ಚಿಸಲು ಅನುಷ್ಠಾನಗೊಳಿಸಲಾಗುತ್ತಿದೆ. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಜಲಾನಯನ ಅಭಿವೃದ್ಧಿ ಮತ್ತು ಇತರ ಉಪಚಾರಗಳು. 2. ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ ಯೋಜನೆಯಡಿ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ. 3. ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ (RPS), ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ. 4. ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ.

೬)	ಪರಿಸರ ರಕ್ಷಣೆ ಹಾಗೂ ಮಣ್ಣಿನ ಸಂರಕ್ಷಣೆಯನ್ನು ಕಾಪಾಡಿಕೊಂಡು ಬರುವಲ್ಲಿ ಗೊಬ್ಬರಗಳ ಬಳಕೆಯ ಬಗ್ಗೆ ಸರ್ಕಾರದವರು ರೂಪಿಸಿರುವ ಪರಿಣಾಮಕಾರಿ ಯೋಜನೆಗಳು ಯಾವುವು;	ಪರಿಸರ ರಕ್ಷಣೆ ಹಾಗೂ ಮಣ್ಣಿನ ಸಂರಕ್ಷಣೆಯನ್ನು ಕಾಪಾಡಿಕೊಂಡು ಬರಲು ಕೃಷಿಯಲ್ಲಿ ಗೊಬ್ಬರಗಳ ಬಳಕೆಯು ಪ್ರಮುಖವಾಗಿದ್ದು, ಈ ನಿಟ್ಟಿನಲ್ಲಿ ಇಲಾಖೆಯು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡಲಾಗುತ್ತಿದೆ. ವಿವರ ಕೆಳಕಂಡಂತಿವೆ. • ಕೃಷಿಯಲ್ಲಿ ಬೆಳೆಗಳಿಗೆ ಬೇಕಾಗುವ ಅವಶ್ಯಕ ಪೋಷಕಾಂಶಗಳ ಬಳಕೆಗೆ ಗೊಬ್ಬರಗಳನ್ನು ವೈಜ್ಞಾನಿಕ ರೀತಿಯಲ್ಲಿ ಬಳಕೆ ಮಾಡಲು ಒತ್ತು ನೀಡಿ ವಿವಿಧ ಕಾರ್ಯಕ್ರಮಗಳ ಮೂಲಕ ಈ ಕುರಿತು ಅರಿವು ಮೂಡಿಸಲಾಗುತ್ತಿದೆ. • ಕೃಷಿ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಸಹಾಯಧನದಲ್ಲಿ ಜಿಪ್ಸಂ, ಕೃಷಿ ಸುಣ್ಣ, ಜೈವಿಕ ಗೊಬ್ಬರಗಳು ಲಘು ಪೋಷಕಾಂಶಗಳು ಹಾಗೂ ಇತರೆ ಸಾವಯವ ಗೊಬ್ಬರಗಳನ್ನು ರೈತ ಸಂಪರ್ಕ ಕೇಂದ್ರಗಳಿಂದ ರೈತರಿಗೆ ಸಹಾಯಧನದಲ್ಲಿ ವಿತರಣೆ ಮಾಡಲಾಗುತ್ತಿದೆ. • ಮಣ್ಣಿನ ಸತ್ವ ಹೆಚ್ಚಿಸುವ ಯೋಜನೆಯಡಿ ಹಸಿರೆಲೆ ಗೊಬ್ಬರ, ಜೈವಿಕ ಗೊಬ್ಬರ, ಮತ್ತು ಸಾವಯವ ಗೊಬ್ಬರಗಳನ್ನು ಸಹಾಯಧನದಲ್ಲಿ ವಿತರಣೆ ಮಾಡಲಾಗುತ್ತಿದೆ. ಮುಂದುವರೆದು. ಬಯೋಡೈಜೆಸ್ಟರ್ ಮತ್ತು ಎರೆಹುಳು ತೊಟ್ಟಿ/ಘಟಕ ನಿರ್ಮಾಣಕ್ಕೆ ಸಹಾಯಧನವನ್ನು ನೀಡಿ ಸಾವಯವ ಗೊಬ್ಬರಗಳ ಉತ್ಪಾದನೆಗೆ ಉತ್ತೇಜನ ನೀಡಲಾಗುತ್ತಿದೆ. ಸಾವಯವ ಕೃಷಿ ಅಳವಡಿಕೆ ಮತ್ತು ಪ್ರಮಾಣೀಕರಣ ಕಾರ್ಯಕ್ರಮದಡಿ ಸಾವಯವ ಪ್ರಮಾಣೀಕರಣಕ್ಕೆ ನೊಂದಾಯಿಸುವ ಅರ್ಹ ಗುಂಪು ಮತ್ತು ವ್ಯಕ್ತಿಗತ ಪ್ರಸ್ತಾವನೆಗಳಿಗೆ ಸಾವಯವ ಪ್ರಮಾಣೀಕರಣ ಶುಲ್ಕ ಭರಿಸುವುದರ ಜೊತೆಯಲ್ಲಿ ಸಾವಯುವ ಕೃಷಿಗೆ ಪೂರಕ ಘಟಕಗಳಾದ ಎರೆಹುಳು ಗೊಬ್ಬರ ಉತ್ಪಾದನಾ ಘಟಕ, ಬಯೋಡೈಜೆಸ್ಟರ್ ನಿರ್ಮಾಣ ಘಟಕ ಹಾಗೂ ಕೊಟ್ಟಿಗೆ ನೆಲಹಾಸು ನಿರ್ಮಾಣಕ್ಕೆ ಶೇ.75ರ ಸಹಾಯಧನವನ್ನು ಒದಗಿಸಲಾಗುತ್ತಿದೆ. ಪ್ರಸ್ತುತ ಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಪರಿಸರ ರಕ್ಷಣೆ ಹಾಗೂ ಮಣ್ಣಿನ ಸಂರಕ್ಷಣೆಯನ್ನು ಕಾಪಾಡುವ ನಿಟ್ಟಿನಲ್ಲಿ ವಿಶ್ವಬ್ಯಾಂಕ್ ನೆರವಿನೊಂದಿಗೆ ಸುಜಲ–III ಯೋಜನೆಯನ್ನು 2013–14ನೇ ಸಾಲಿನಿಂದ ಡಿಸೆಂಬರ್ 2019 ರವರೆಗೆ ಅನುಷ್ಠಾನಗೊಳಿಸಲಾಗಿರುತ್ತದೆ.

ಇ)	ರಾಜ್ಯದಲ್ಲಿ ಇಸ್ರೇಲ್ ಮಾದರಿಯ (ಕೃಷಿ ಪದ್ಧತಿ, ಸಾವಯವ,ಶೂನ್ಯ ಬಂಡವಾಳ ನೈಸರ್ಗಿಕ) ಕೃಷಿ ಪದ್ಧತಿಯನ್ನು ಅನುಸರಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ರಾಜ್ಯದಲ್ಲಿನ ಕೃಷಿ ಮತ್ತು ತೋಟಗಾರಿಕೆ ವಲಯದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಪೂರಕವಾದ ಸಾಧಕ-ಬಾಧಕಗಳನ್ನು ಪರಿಶೀಲಿಸಿ ರೈತರಿಗೆ ಉಪಯುಕ್ತವಾದ ಸಲಹೆ ಮತ್ತು ಮಾರ್ಗದರ್ಶನಗಳ ಕಾರ್ಯಸೂಚಿಗಳನ್ನು ಅಂತಿಮಗೊಳಿಸಲು ಈ ಸಂಬಂಧ ರಚಿಸಿದ್ದ ಸಮಿತಿ ವರದಿಯ ಆಧಾರದ ಮೇಲೆ ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಕೃಷಿ ಮಿಷನ್ ಅನ್ನು 2019 ರ ಫೆಬ್ರವರಿಯಲ್ಲಿ ಸ್ಥಾಪಿಸಲಾಗಿದೆ. ರಾಜ್ಯದಲ್ಲಿನ ನಾಲ್ಕು ಕೃಷಿ ಮತ್ತು ಒಂದು ತೋಟಗಾರಿಕೆ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯನ್ನು ಜಾರಿಗೆ ತರಲು ಕ್ರಮವಹಿಸಲಾಗುತ್ತಿದೆ. ಈಗಾಗಲೇ ಸದರಿ ವಿಶ್ವವಿದ್ಯಾಲಯಗಳು ಕರಡು ವರದಿಗಳನ್ನು ತಯಾರಿಸಿ ಸಲ್ಲಿಸಿರುತ್ತವೆ. ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಕೃಷಿ ಪದ್ಧತಿಗಳ ಕುರಿತು ರೈತರು ಅನುಸರಿಸಬೇಕಾದ ಮತ್ತು ರೈತರಿಗೆ ಉಪಯುಕ್ತವಾಗುವ ಮಾದರಿಗಳ ಬಗ್ಗೆ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ ಕೃಷಿ ಮೇಳ-2019 ರಲ್ಲಿ ರೈತರಿಗೆ ಅರಿವು ಮೂಡಿಸುವ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಸದರಿ ಕೃಷಿ ಪದ್ಧತಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಹಂತಹಂತವಾಗಿ ಪರಿಶೀಲಿಸಲಾಗುತ್ತಿದೆ. ಸಾವಯವ ಕೃಷಿ ಯೋಜನೆಯಡಿ ಸಾವಯವ ಕೃಷಿ ಅಳವಡಿಕೆ ಮತ್ತು ಪ್ರಮಾಣೀಕರಣ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು ರಾಜ್ಯದ ಸಾವಯವ ಪ್ರಮಾಣೀಕೃತ ಪ್ರದೇಶವನ್ನು ಪ್ರಸ್ತುತ 1.0 ಲಕ್ಷ ಹೆಕ್ಟೇರ್‌ಗಳಿಂದ 1.50 ಲಕ್ಷ ಹೆಕ್ಟೇರ್‌ಗಳಿಗೆ ಹೆಚ್ಚಿಸುವ ಉದ್ದೇಶದಿಂದ ಅನುಷ್ಠಾನಗೊಳಿಸಲಾಗುತ್ತದೆ. ಈ ಕಾರ್ಯಕ್ರಮವು ಪ್ರಸ್ತಾವನೆ ಆಧಾರಿತವಾಗಿದ್ದು ಅರ್ಹ ಗುಂಪುಗಳು ಮತ್ತು ವ್ಯಕ್ತಿಗತ ಪ್ರಸ್ತಾವನೆಗಳಿಗೆ ಸಾವಯವ ಪ್ರಮಾಣೀಕರಣ ಶುಲ್ಕ ಭರಿಸುವುದರ ಜೊತೆಯಲ್ಲಿ ಸಾವಯವ ಕೃಷಿ ಪೂರಕ ಘಟಕಗಳಾದ ಎರೆಹುಳು ಗೊಬ್ಬರ ಉತ್ಪಾದನಾ ಘಟಕ, ಬಯೋ ಡೈಜೆಸ್ಟರ್ ನಿರ್ಮಾಣ ಹಾಗೂ ಕೊಟ್ಟಿಗೆ ನೆಲಹಾಸು ನಿರ್ಮಾಣಕ್ಕೆ ಶೇ.75ರ ಸಹಾಯಧನವನ್ನು ಒದಗಿಸಲಾಗುತ್ತಿದೆ. ಪ್ರಸ್ತುತ 279 ಗುಂಪುಗಳು ಮತ್ತು 397 ವ್ಯಕ್ತಿಗತ ಪ್ರಸ್ತಾವನೆಗಳಿಗೆ

		ಸಂಬಂಧಿಸಿದಂತೆ ಪ್ರಮಾಣೀಕರಣ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ರಾಜ್ಯದಲ್ಲಿ ಹೆಚ್ಚುವರಿಯಾಗಿ ಸುಮಾರು 21000 ಹೆಕ್ಟೇರ್‌ರಷ್ಟು ಪ್ರದೇಶವನ್ನು ಸದರಿ ಯೋಜನೆಯಡಿ ಪ್ರಮಾಣೀಕರಣಕ್ಕಾಗಿ ಒಳಪಡಿಸಲಾಗಿದ್ದು, ಪ್ರಸ್ತುತ ಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ.
		ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪದ್ಧತಿಯ ವೈಜ್ಞಾನಿಕ ಮೌಲ್ವೀಕರಣವನ್ನು (Scientific validation) ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳ ಮುಖಾಂತರ ಪ್ರಾಯೋಗಿಕ ಪ್ರಯೋಗಗಳನ್ನು Operational Research Project (ORP) ಮಾದರಿಯಲ್ಲಿ ರಾಜ್ಯದ ಎಲ್ಲಾ 10 ಹವಾಮಾನ ವಲಯಗಳಲ್ಲಿ, ಸಂಶೋಧನಾ ಕೇಂದ್ರಗಳಲ್ಲಿ ಹಾಗೂ ರೈತರ ಕ್ಷೇತ್ರಗಳಲ್ಲಿ ಪ್ರಯೋಗಗಳನ್ನು ಕೈಗೊಳ್ಳಲಾಗುತ್ತಿದ್ದು ಪ್ರಸ್ತುತ ಮೂರನೇ ಹಂಗಾಮಿನ ಪ್ರಯೋಗಗಳೂ ಕೂಡ ಪ್ರಗತಿಯಲ್ಲಿರುತ್ತವೆ.

ಸಂಖ್ಯೆ: ಕೃಇ/104/ಕೃಕೈಉ/2020

(ಬಿ.ಸಿ.ಪಾಟೀಲ್)

ಕೃಷಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 271

ಸದಸ್ಯರ ಹೆಸರು : ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ)

ಉತ್ತರಿಸುವ ದಿನಾಂಕ : 21-09-2020

ಉತ್ತರಿಸುವ ಸಚಿವರು : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಮೀನುಗಾರರು ಹಾಗೂ ಮೀನುಗಾರರ [illegible] ಸುರಕ್ಷತೆಗಾಗಿ [illegible] ಸರ್ಕಾರದಿಂದ [illegible] (ವಿವರ ನೀಡುವುದು)	ಮೀನುಗಾರರು ಹಾಗೂ ಮೀನುಗಾರರ ದೋಣಿಗಳ ಸುರಕ್ಷತೆಗಾಗಿ [illegible] ಅಳವಡಿಸಿಕೊಳ್ಳಲು ಸರ್ಕಾರದಿಂದ [illegible] ನೀಡಿರುವುದಿಲ್ಲ.
ಆ)	[illegible]	ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಇ)	[illegible]	ರಾಜ್ಯದಲ್ಲಿ 8 ಮೀನುಗಾರಿಕೆ ಬಂದರು ಮತ್ತು [illegible] [illegible]

	(ರೂ.16.97 ಕೋಟಿ) [illegible] ಮೀನುಗಾರಿಕೆ ಬಂದರಿನ ಅಭಿವೃದ್ಧಿ (ರೂ.180.84 ಕೋಟಿ) [illegible] ಮೀನುಗಾರಿಕೆ ಬಂದರಿನ ನಿರ್ಮಾಣ (ರೂ.196.51 ಕೋಟಿ) [illegible] ಮೀನುಗಾರಿಕೆ [illegible] ನಿರ್ಮಾಣ (ರೂ.[illegible] ಕೋಟಿ) [illegible] ಬಂದರು ನಿರ್ಮಾಣ (ರೂ.15.00 ಕೋಟಿ) [illegible] ಮೀನುಗಾರಿಕೆ [illegible] ನಿರ್ಮಾಣ (ರೂ.[illegible] ಕೋಟಿ) [illegible] ನಿರ್ಮಾಣ (ರೂ.12.50 ಕೋಟಿ) [illegible] ಜೆಟ್ಟಿ ನಿರ್ಮಾಣ ಸಂಬಂಧಿಸಿದ ಕಾಮಗಾರಿಗಳು [illegible] [illegible] ಜೆಟ್ಟಿ ನಿರ್ಮಾಣ (ರೂ.2.00 ಕೋಟಿ) [illegible] ಮೀನುಗಾರಿಕೆ ಜೆಟ್ಟಿ [illegible] (ರೂ.2.70 ಕೋಟಿ) [illegible] ಜೆಟ್ಟಿ ನಿರ್ಮಾಣ (ರೂ.9.60 ಕೋಟಿ) [illegible] ನಿರ್ಮಾಣ (ರೂ.3.37 ಕೋಟಿ) [illegible] ಜೆಟ್ಟಿ [illegible] (ರೂ.1.30 ಕೋಟಿ) [illegible] ಮೀನುಗಾರಿಕೆ [illegible] ಜೆಟ್ಟಿ ನಿರ್ಮಾಣ (ರೂ.2.40 ಕೋಟಿ) ಮೀನುಗಾರಿಕೆ [illegible] ಹಾಗೂ [illegible] ಮಾಡಿ [illegible] ಮುಂದಿನ [illegible] ರೂ.250 ಕೋಟಿ [illegible] ಮಂಜೂರಾತಿ [illegible]

ಸಂಖ್ಯೆ: [illegible] 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 271 ರ

ಅನುಬಂಧ-1

ಒಳನಾಡು ಹಾಗು ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸೀಗಡಿ ಮತ್ತು ಮೀನುಕೃಷಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮೀನುಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ

I. ರಾಜ್ಯ ವಲಯ ಯೋಜನೆಗಳು

1. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ

ಅ. "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲಾಗುವುದು.

ಆ. ರಾಜ್ಯದ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ ಮರಿಗಳನ್ನು ಬಿತ್ತನೆ ಮಾಡಲಾಗುವುದು.

ಇ. ಸರ್ಕಾರ ಸ್ವಾಮ್ಯದ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/-ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಈ. ಸಮಗ್ರ ಮೀನು ಕೃಷಿಗೆ ಕ್ಲಸ್ಟರ್ ಮಾದರಿಯಲ್ಲಿ ಆಯ್ದ 14 ಜಂಟಿ ತಾಲ್ಲೂಕುಗಳಲ್ಲಿ ಸಮಗ್ರವಾಗಿ ಮತ್ತು ಸುಸಂಘಟಿತ ಮಾದರಿಯಲ್ಲಿ ಮೀನು ಕೃಷಿಯ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು. ಈ ಯೋಜನೆಯಡಿ ಕೃಷಿಕರಿಗೆ ಮೀನು ಸಾಕಾಣಿಕೆಗೆ ಕೊಳ ಮತ್ತು ಇತರೆ ಮೂಲಭೂತ ಸೌಕರ್ಯಗಳ ಸೃಷ್ಟಿಗೆ ಸಹಾಯಧನ ನೀಡಲಾಗುವುದು. ಕ್ಲಸ್ಟರ್ ಪ್ರದೇಶದಲ್ಲಿ ಕೃಷಿಗೆ ಅನುಪಯುಕ್ತವಾಗಿರುವ ಜೌಗು-ಚೌಳು ಪ್ರದೇಶಗಳಲ್ಲಿ ಮೀನು ಸಾಕಾಣಿಕೆಗೆ ಆದ್ಯತೆ ನೀಡಲಾಗುವುದು.

ಉ. ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸಿಗಡಿ ಮತ್ತು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ 400 ಘಟಕಗಳಿಗೆ ಸಹಾಯಧನ ನೀಡುವ ಉದ್ದೇಶದಿಂದ 2 ಕೋಟಿ ರೂ.ಗಳನ್ನು ನೀಡಲಾಗಿದೆ.

2. ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ

ರಾಜ್ಯದ ಆಯ್ದ ಜಲಾಶಯಗಳಲ್ಲಿ ಬೆರಳುದ್ದದ ಮೀನು ಮರಿ (Advanced fingerlings) ಬಿತ್ತನೆ ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬೆರಳುದ್ದದ ಮೀನುಮರಿಗಳನ್ನು ನೊಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುವುದು.

3. ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ: ಮೀನುಗಾರಿಕೆ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (ಕೇಂದ್ರ ಪುರಸ್ಕೃತ ಯೋಜನೆ)

ಕೇಂದ್ರ ಸರ್ಕಾರದ ಈ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

II. ಜಿಲ್ಲಾ ಪಂಚಾಯತ್ ಯೋಜನೆಗಳು

1. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/- ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

III. ಕೆರೆಗಳ ಅಭಿವೃದ್ಧಿ:

ರಾಜ್ಯದಲ್ಲಿರುವ ಒಳನಾಡು ಜಲಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸಲು ಹೊಸ ಗುತ್ತಿಗೆ ನಿಯಮಾವಳಿಗಳನ್ನು ರೂಪಿಸಿದ್ದು, ಈ ನಿಯಮಾವಳಿ ಪ್ರಕಾರ ಈ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ನೋಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘಗಳಿಗೆ ಅವಕಾಶ ಕಲ್ಪಿಸಲಾಗಿದೆ. ಗುತ್ತಿಗೆಗೆ ಕೋರದ ಕೆರೆಗಳನ್ನು ಸಾರ್ವಜನಿಕವಾಗಿ ಟೆಂಡರ್ ಕಂ ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿಪಡಿಸಲಾಗುವುದು. ಕೆರಗಳ ಶೇ.50ರ ಜಲ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರ್ ಜಲ ವಿಸ್ತೀರ್ಣಕ್ಕೆ ರೂ.300/- ರಂತೆ ಹಾಗೂ ಹಿಂದಿನ 3 ವರ್ಷಗಳ ಸರಾಸರಿ ಗುತ್ತಿಗೆ ಮೊತ್ತ, ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಗುತ್ತಿಗೆ ಮೊತ್ತವಾಗಿ ನಿಗದಿಪಡಿಸಿ ಗರಿಷ್ಠ 5 ವರ್ಷಗಳ ಅವಧಿಗೆ ಮೀನುಕೃಷಿಗೆ ನೀಡಲಾಗುವುದು.

* * * *

3. ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ: ಮೀನುಗಾರಿಕೆ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (ಕೇಂದ್ರ ಪುರಸ್ಕೃತ ಯೋಜನೆ)

ಕೇಂದ್ರ ಸರ್ಕಾರದ ಈ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು ಮತ್ತು ಇತರ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

II. ಜಿಲ್ಲಾ ಪಂಚಾಯತ್ ಯೋಜನೆಗಳು

1. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/- ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

III. ಕೆರೆಗಳ ಅಭಿವೃದ್ಧಿ:

ರಾಜ್ಯದಲ್ಲಿರುವ ಒಳನಾಡು ಜಲಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸಲು ಹೊಸ ಗುತ್ತಿಗೆ ನಿಯಮಾವಳಿಗಳನ್ನು ರೂಪಿಸಿದ್ದು, ಈ ನಿಯಮಾವಳಿ ಪ್ರಕಾರ ಈ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ನೋಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘಗಳಿಗೆ ಅವಕಾಶ ಕಲ್ಪಿಸಲಾಗಿದೆ. ಗುತ್ತಿಗೆಗೆ ಕೋರದ ಕೆರೆಗಳನ್ನು ಸಾರ್ವಜನಿಕವಾಗಿ ಟೆಂಡರ್ ಕಂ ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿಪಡಿಸಲಾಗುವುದು. ಕೆರೆಗಳ ಶೇ.50ರ ಜಲ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರ್ ಜಲ ವಿಸ್ತೀರ್ಣಕ್ಕೆ ರೂ.300/- ರಂತೆ ಹಾಗೂ ಹಿಂದಿನ 3 ವರ್ಷಗಳ ಸರಾಸರಿ ಗುತ್ತಿಗೆ ಮೊತ್ತ, ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಗುತ್ತಿಗೆ ಮೊತ್ತವಾಗಿ ನಿಗದಿಪಡಿಸಿ ಗರಿಷ್ಠ 5 ವರ್ಷಗಳ ಅವಧಿಗೆ ಮೀನುಕೃಷಿಗೆ ನೀಡಲಾಗುವುದು.

* * * *

ಒಳನಾಡು ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹಿಸುವ
ನಿಟ್ಟಿನಲ್ಲಿ ಕಳೆದ ಎರಡು ವರ್ಷಗಳಲ್ಲಿ ನೀಡಿರುವ ಸಹಾಯಧನ ವಿವರ

			2018-19		2019-20	
	ಯೋಜನೆ ವಿವರ	ಘಟಕಗಳು	ಭೌತಿಕ	ಆರ್ಥಿಕ (ರೂ. ಲಕ್ಷಗಳಲ್ಲಿ)	ಭೌತಿಕ	ಆರ್ಥಿಕ (ರೂ. ಲಕ್ಷಗಳಲ್ಲಿ)
1	ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ					
a	"ಮತ್ಸ್ಯ ಕೃಷಿ ಆಶಾ ಕಿರಣ"	ಕೆರೆಗಳು (ಸಂಖ್ಯೆ)	80	149.44	122	238.08
b	"ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ"	ಕೆರೆಗಳು (ಸಂಖ್ಯೆ)	0	0.00	233	183.90
c	ಮೀನು ಮರಿ ಖರೀದಿಗೆ ಸಹಾಯಧನ	ಫಲಾನುಭವಿಗಳು (ಸಂಖ್ಯೆ)	208	9.95	776	37.74
d	ಸೀಗಡಿ ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹ"					
i	ಪಂಜರ ಕೃಷಿ	ಪಂಜರಗಳು (ಸಂಖ್ಯೆ)	0	0.00	270	70.67
ii	ಸೀಗಡಿ ಕೃಷಿ	ಹೆಕ್ಟೇರ್ ಗಳಲ್ಲಿ	0	0.00	56	22.15
2	ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ	ಜಲಾಶಯಗಳು (ಸಂಖ್ಯೆ)	3	50.00	33	144.71
3	ನೀಲಿ ಕ್ರಾಂತಿ ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ					
	ಮೀನುಕೊಳ ನಿರ್ಮಾಣ	ಹೆಕ್ಟೇರ್ ಗಳಲ್ಲಿ	95.54	340.49	0	0.00
	ಕಪ್ಪೆಚಿಪ್ಪು ಕೃಷಿ	ಘಟಕಗಳು (ಸಂಖ್ಯೆ)	156	10.26	0	0.00
	ಮಧ್ಯಮ ಗಾತ್ರದ RAS ಘಟಕಗಳು	ಘಟಕಗಳು (ಸಂಖ್ಯೆ)	0	0.00	1	21.40
4	ಕೆರೆಗಳ ಅಭಿವೃದ್ಧಿ (ಇಲಾಖೆ ಕೆರೆ)	ಕೆರೆಗಳು (ಸಂಖ್ಯೆ)	2791		2976	

****

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**272**
ಉತ್ತರಿಸಬೇಕಾದ ದಿನಾಂಕ	:	21.09.2020
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ಮೂಡಬಿದ್ರೆ/ ಮೂಲ್ಕಿ ಪ್ರದೇಶದಲ್ಲಿ ವಸತಿ ಯೋಜನೆಗಳ ಅನುಷ್ಠಾನಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ;	ವಸತಿ ಯೋಜನೆಗಳಡಿ, ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ: 1. ಬಸವ ವಸತಿ ಯೋಜನೆ 2. ಡಾ|| ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾ & ನ) 3. ದೇವರಾಜ ಅರಸು ವಸತಿ ಯೋಜನೆ (ಗ್ರಾ & ನ) 4. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ & ನ) 5. ವಾಜಪೇಯಿ ನಗರ ವಸತಿ ಯೋಜನೆ.
(ಆ)	ಕಳೆದ ಎರಡು ವರ್ಷಗಳಲ್ಲಿ ಮೂಡಬಿದ್ರೆ/ ಮೂಲ್ಕಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ವಸತಿ ಯೋಜನೆಗಳ ಮೂಲಕ ಎಷ್ಟು ಫಲಾನುಭವಿಗಳಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ ;	ಕಳೆದ ಎರಡು ವರ್ಷಗಳಲ್ಲಿ ಮೂಡಬಿದ್ರೆ/ ಮೂಲ್ಕಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ವಸತಿ ಯೋಜನೆಗಳಡಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಒಟ್ಟು 227 ಫಲಾನುಭವಿಗಳಿಗೆ ವಸತಿಗಾಗಿ ಮಂಜೂರಾತಿ ನೀಡಲಾದ ವಿವರ ಈ ಕೆಳಗಿನಂತಿದೆ.

ಕ್ರ. ಸಂ	ಯೋಜನೆ	ಮಂಜೂರಾದ ಮನೆಗಳು
1	ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ)	4
2	ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)	223
ಒಟ್ಟು		**227**

ಕ್ರ ಸಂ	ಪ್ರಶ್ನೆ	ಉತ್ತರ
(ಇ)	ಮೂಡಬಿದ್ರೆ/ ಮೂಲ್ಕಿ ಪ್ರದೇಶಗಳಲ್ಲಿ ವಸತಿ ಯೋಜನಾನುಷ್ಠಾನದ ಫಲಾನುಭವಿಗಳಿಗೆ ವಸತಿ ನಿಗಮದಿಂದ ಹಣ ಸಂದಾಯದಲ್ಲಿ ಉಂಟಾಗುತ್ತಿರುವ ವಿಳಂಬದಿಂದಾಗಿ ಫಲಾನುಭವಿಗಳು ಗಂಭೀರ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವರಿಗೆ ಸಂದಾಯವಾಗಬೇಕಾದ ಸಹಾಯಧನವನ್ನು ಕೂಡಲೇ ಪಾವತಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?	ವಿವಿಧ ವಸತಿ ಯೋಜನೆಗಳಡಿ ಅನುದಾನ ದುರುಪಯೋಗ ಆಗಿರುವ ಬಗ್ಗೆ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದಂತೆ ಪ್ರಗತಿಯಲ್ಲಿರುವ ಮನೆಗಳನ್ನು Vigil App ಮೂಲಕ ಮತ್ತೊಮ್ಮೆ ಪರಿಶೀಲಿಸಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯ ನಿರ್ವಾಹಕ ಅಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಅನುಮೋದಿಸಿ 62 ಮನೆಗಳು ಅರ್ಹಗೊಂಡಿರುತ್ತವೆ. ಅರ್ಹಗೊಂಡ ಮನೆಗಳ ಪೈಕಿ 61 ಮನೆಗಳಿಗೆ ಒಟ್ಟು ರೂ.59.12 ಲಕ್ಷಗಳನ್ನು ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಾಗಿದೆ. ಇನ್ನುಳಿದ ಫಲಾನುಭವಿಗಳು ನಿರ್ಮಿಸಿಕೊಂಡ ಮನೆಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತವಾಗಿ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ :ವಇ 259 ಹೆಚ್ಎಂ 2020

(ವಿ. ಸೋಮಣ್ಣ)
ವಸತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	274
ಸದಸ್ಯರ ಹೆಸರು	:	ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸುವ ದಿನಾಂಕ	:	21.09.2020.
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ

ಕ್ರಸಂ	ಪ್ರಶ್ನೆ	ಉತ್ತರ
ಅ)	ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿ, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ/ ಮೂಲ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳಾವುವು;	ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಸಂಬಂಧಿಸಿದಂತೆ, 2018-19 ಮತ್ತು 2019-20 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ/ಮೂಲ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಯಾವುದೇ ಕಾಮಗಾರಿಗಳು ಮಂಜೂರಾಗಿರುವುದಿಲ್ಲ. ಆದರೆ 2016-17 ನೇ ಸಾಲಿನಲ್ಲಿ 3 ಕಾಮಗಾರಿಗಳು ಮಂಜೂರಾಗಿದ್ದು, ಪ್ರಸ್ತುತ ಎಲ್ಲ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಮಂಜೂರಾದ ಮೊತ್ತ	ಷರಾ
1	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ತಾಕೋಡೆ ಚರ್ಚ್‌ನಿಂದ ಮುಚ್ಚುಮೊಗರು ರಸ್ತೆಯ ಅಭಿವೃದ್ಧಿ ಕಾಮಗಾರಿ (ಜಾಬ್ ಸಂಖ್ಯೆ ಸಿಆರ್‌ಎಫ್-ಕೆಎನ್‌ಟಿ-2016-17-1832)	200.00	ಕಾಮಗಾರಿ ಮುಗಿದಿದೆ.
2	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಕೊನ್ನಪದವಿನಿಂದ ಪೂಪಾಡಿ ಕಲ್ಲು ರಸ್ತೆಯ ಅಭಿವೃದ್ಧಿ ಕಾಮಗಾರಿ (ಜಾಬ್ ಸಂಖ್ಯೆ ಸಿಆರ್‌ಎಫ್-ಕೆಎನ್‌ಟಿ-2016-17-1833)	300.00	ಕಾಮಗಾರಿ ಮುಗಿದಿದೆ.
3	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಶಿರ್ತಾಡಿ-ಮಾರೂರು-ಹೊಸಂಗಡಿ ರಸ್ತೆ ಕಿ.ಮೀ.4.20 ರಲ್ಲಿ ಸೇತುವೆ ನಿರ್ಮಾಣ ಕಾಮಗಾರಿ. (ಜಾಬ್ ಸಂಖ್ಯೆ ಸಿಆರ್‌ಎಫ್-ಕೆಎನ್‌ಟಿ-2016-17-1671)	500.00	ಕಾಮಗಾರಿ ಮುಗಿದಿದೆ.

ಕ್ರಸಂ	ಪ್ರಶ್ನೆ	ಉತ್ತರ
ಆ)	ಇವುಗಳಲ್ಲಿ ಪೂರ್ಣಗೊಂಡ/ ಅಪೂರ್ಣವಾದ ಹಾಗೂ ಯೋಜಿತ ಸಿ.ಆರ್.ಎಫ್ ರಸ್ತೆಗಳೆಷ್ಟು (ವಿವರ ನೀಡುವುದು);	ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಸಂಬಂಧಿಸಿದಂತೆ, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ/ಮೂಲ್ಕಿ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಂಡ ಮೇಲ್ಕಂಡ ಎಲ್ಲ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಮುಂದುವರೆದು, ಯೋಜಿತ ಸಿ.ಆರ್.ಎಫ್ ರಸ್ತೆಗಳು ಯಾವುದೂ ಇರುವುದಿಲ್ಲ.

ಕ್ರಸಂ	ಪ್ರಶ್ನೆ	ಉತ್ತರ
ಇ)	ಮೂಡಬಿದ್ರೆ/ ಮೂಲ್ಕಿ ಕ್ಷೇತ್ರವು ಗ್ರಾಮೀಣ ಪ್ರದೇಶಗಳಿಂದ ಕೂಡಿದ್ದು, ರಸ್ತೆ ಸೌಲಭ್ಯಗಳ ವಿಚಾರದಲ್ಲಿ ಹಿಂದುಳಿದಿರುವ ಕ್ಷೇತ್ರವಾಗಿದ್ದು, ಗ್ರಾಮೀಣ ಪ್ರದೇಶಗಳಿಗೆ ರಸ್ತೆ ಯೋಜನಾ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?	ಮುಲ್ಕಿ–ಮೂಡಬಿದ್ರೆ ಕ್ಷೇತ್ರವು ಗ್ರಾಮೀಣ ಪ್ರದೇಶಗಳಿಂದ ಕೂಡಿದ್ದು, ರಸ್ತೆ ಸೌಲಭ್ಯಗಳನ್ನು ಒದಗಿಸಲು ಒಟ್ಟು 82.00 ಕಿ.ಮೀ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಸರ್ಕಾರದ ಆದೇಶ ಸಂಖ್ಯೆ:ಲೋ.ಇ–85/5 ಇಎಪಿ 2020 ಬೆಂಗಳೂರು ದಿನಾಂಕ:01.09.2020 ರಂತೆ ಮೇಲ್ದರ್ಜೆಗೆ ಏರಿಸಲಾಗಿದೆ. ಮುಂದುವರೆದು ಮುಲ್ಕಿ–ಮೂಡಬಿದ್ರೆ ಕ್ಷೇತ್ರದ ಗ್ರಾಮೀಣ ಪ್ರದೇಶದ ರಸ್ತೆಗಳನ್ನು ಒಂದು ಭಾರಿ ಅಭಿವೃದ್ಧಿ ಯೋಜನೆಯಡಿ 2018–19ನೇ ಸಾಲಿನಲ್ಲಿ ರೂ.525.00 ಲಕ್ಷದ ಒಟ್ಟು 07 ಕಾಮಗಾರಿಗಳನ್ನು ಹಾಗೂ 2019–20ನೇ ಸಾಲಿನಲ್ಲಿ ರೂ.1700.00 ಲಕ್ಷದ ಒಟ್ಟು 31 ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಕಡತ ಸಂಖ್ಯೆ: ಲೋಇ 43 ಸಿಆರ್‌ಎಫ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ,
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 276

ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)

ಉತ್ತರಿಸುವ ದಿನಾಂಕ : 21.09.2020

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
